# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 231 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 19.03.2025 • ಬುಧವಾರ • ಪುಟ:04 • ಬೆಲೆ:2
Volume:02 • Issue: 231 • PRGI No:KARKAN/2023/88055 • VIJAYANAGARA • 19.03.2025 • Wednesday • Page:04 • Rs:2



Good Opportunity for Branding

1,20,000+

Digital E-PAPER READERS

No.1 HAMPI TIMES LEADING PRINT & DIGITAL District News Paper

Call Us for Advertisements: 9448633038


## ದೇವಾಲಯ ದರ್ಶನ




ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಆನಂದ ಬಾಣ





ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ

SSLC ವಿದ್ಯಾರ್ಥಿಗಳಿಗಾಗಿ
ಹೈಸ್ಕೋರ್ ಮತ್ತು ಸರಳ ಅಭ್ಯಾಸಕ್ಕೆ ತಜ್ಞ ಶಿಕ್ಷಕರಿಂದ ಸುಲಭ ಅಂಶಗಳು ನಿಮ್ಮ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ

scan to read epaper

9 ಜುಲೈ 2024 ರಿಂದ ಪ್ರತಿದಿನ

ನಿಮ್ಮ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿ ಇನ್ಸ್ಟಾಲ್ ಮಾಡಿಕೊಳ್ಳಿ!


# ಕನ್ನಡ ವಿವಿ ದೇಶದಲ್ಲಿಯೇ ವಿಶಿಷ್ಟ

### ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಅಭಿಮತ | ಕನ್ನಡ ವಿವಿಯಲ್ಲಿ ಜ್ಞಾನಕ್ಕೆ ಮೊದಲ ಆದ್ಯತೆ



■ **ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ವಿಶ್ವವಿದ್ಯಾಲಯ ಕರ್ನಾಟಕದಲ್ಲಿ ಅಲ್ಲದೆ ಭಾರತದಲ್ಲಿಯೇ ಬಹಳ ವಿಶಿಷ್ಟವಾದ ವಿಶ್ವವಿದ್ಯಾಲಯ. ನಮ್ಮ ವಿಶ್ವವಿದ್ಯಾಲಯದಲ್ಲಿ ಅಂತರ್ ಶಿಸ್ತೀಯ ಮತ್ತು ಬಹುಶಿಸ್ತೀಯ ಅಧ್ಯಯನಕ್ಕೆ ಆದ್ಯತೆ ನೀಡಲಾಗುತ್ತದೆ ಎಂದು ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ನುಡಿ ಕಟ್ಟಡದಲ್ಲಿ ಆಯೋಜಿಸಲಾದ 2024–25ನೇ ಸಾಲಿನ ಎಂ.ಎ. ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಸ್ವಾಗತ ಸಮಾರಂಭದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಕನ್ನಡ ಸಾಹಿತ್ಯದ ವಿದ್ಯಾರ್ಥಿಗಳು ಭಾಷಾಂತರ, ಶಾಸನಶಾಸ್ತ್ರ ಮತ್ತು ದ್ರಾವಿಡ ಮತ್ತು ಭಾಷಾಧ್ಯಯನ ವಿಷಯಗಳಲ್ಲಿ ಪರಿಣಿತಿ ಪಡೆಯಬಹುದು. ಮದ್ಯಕಾಲಿನ ಕನ್ನಡ ಸಾಹಿತ್ಯ ಮತ್ತು ದಾಸ ಸಾಹಿತ್ಯದ ನೆಲೆ ನಮ್ಮ ಹಂಪಿಯ ಪರಿಸರ. ಈ ಪ್ರದೇಶದಲ್ಲಿ ವಚನಗಳ ಸಂಗ್ರಹ ಮತ್ತು ಅದಕ್ಕೆ ಸೊಗಸಾದ ವ್ಯಾಖ್ಯಾನಗಳನ್ನು ಟೀಕೆ–ಟಿಪ್ಪಣಿಗಳನ್ನು ಬರೆಯಲಾಯಿತು. ಇಂತಹ ಪಾರಂಪರಿಕ ಸ್ಥಳದಲ್ಲಿ ಅಧ್ಯಯನ ಕೈಗೊಂಡಿರುವ ವಿದ್ಯಾರ್ಥಿ ಸಮೂಹದ ಜವಾಬ್ದಾರಿ ದೊಡ್ಡದು ಎಂದರು.

ಅಧ್ಯಯನಾಂಗದ ನಿರ್ದೇಶಕ ಡಾ. ಅಮರೇಶ ಯತಗಲ್ ಮಾತನಾಡಿ, ಕನ್ನಡ ವಿಶ್ವವಿದ್ಯಾಲಯ ಬಹಳ ಸಂಪತ್ತಭರಿತ ನೆಲ. ವಿದ್ಯಾರ್ಥಿಗಳು ಜೀವನದಲ್ಲಿ ಏಳು ಬೀಳುಗಳನ್ನು ಸರಿ ಸಮಾನವಾಗಿ ತೆಗೆದುಕೊಳ್ಳಬೇಕು. ಕನ್ನಡ ವಿಶ್ವವಿದ್ಯಾಲಯದಲ್ಲಿ ಜ್ಞಾನಕ್ಕೆ ಮೊದಲ ಆದ್ಯತೆ. ವಿದ್ಯಾರ್ಥಿಗಳು ಮನಸ್ಸನ್ನು ಬೇರೆಡೆಗೆ ಹರಿಯಬಿಡದೆ, ವಿದ್ಯಾಭ್ಯಾಸದ ಕಡೆ ಗಮನ ನೀಡಬೇಕು. ಸಮಯವನ್ನು ಎಲ್ಲರೂ ಸರಿಯಾಗಿ ಬಳಸಿಕೊಳ್ಳಿ. ನಿಮ್ಮ ಬಾಳು ಬಂಗಾರವಾಗಲಿ ಎಂದು ಹಾರೈಸಿದರು.

ಕನ್ನಡ ವಿಶ್ವವಿದ್ಯಾಲಯ ಭಾಷಾ ನಿಕಾಯದ ಡೀನ್ ಡಾ.ಎಫ್.ಟಿ. ಹಳ್ಳಿಕೇರಿ ಮಾತನಾಡಿ, ಪ್ರತಿಯೊಬ್ಬ ವಿದ್ಯಾರ್ಥಿಯ ಪಾಲಿಗೆ ಸ್ನಾತಕೋತರ ಪದವಿಯು ಒಂದು ಪ್ರಮುಖ ಮೈಲುಗಲ್ಲು. ಕನ್ನಡ ವಿಶ್ವವಿದ್ಯಾಲಯದ ಸೌಲಭ್ಯ, ಮತ್ತೆ ಎಲ್ಲೂ ಸಿಗುವುದಿಲ್ಲ. ಈ ಸೌಲಭ್ಯಗಳನ್ನು ಬಳಸಿಕೊಂಡು ನಾಡಿಗೆ ಮತ್ತು ದೇಶಕ್ಕೆ ಒಳ್ಳೆಯ ಕೊಡುಗೆ ನೀಡಬೇಕು ಎಂದು ತಿಳಿಸಿದರು.

ಎಂ.ಎ ಕನ್ನಡ ಸ್ನಾತಕೋತ್ತರ ಪದವಿ ಸಂಚಾಲಕರಾದ ಡಾ. ವೆಂಕಟಗಿರಿ ದಳವಾಯಿ ಮಾತನಾಡಿ, ಸ್ವಾಗತ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಪ್ರತಿಭೆ ಮತ್ತು ಕೌಶಲ್ಯಗಳನ್ನು ಹೊರತರುವ ಅತ್ಯುತ್ತಮ ವೇದಿಕೆ. ವಿದ್ಯಾರ್ಥಿ ಜೀವನ ಎನ್ನುವುದು ಸುವರ್ಣ ಯುಗ. ಇದರ ನೆನಪು ಸದಾ ಹಸಿರಾಗಿರುತ್ತದೆ ಎಂದರು. ಕಾರ್ಯಕ್ರಮದಲ್ಲಿ ವಿವಿಧ ನಿಕಾಯದ ಡೀನರು, ವಿವಿಧ ವಿಭಾಗಗಳ ಮುಖ್ಯಸ್ಥರು, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಾ.21ರಿಂದ ಆರಂಭ

### ವೆಬ್‌ಕಾಸ್ಟಿಂಗ್ ಸಿದ್ದತೆ ಪೂರ್ಣ

■ **ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲೆಯಲ್ಲಿ ಮಾರ್ಚ್ 21 ರಿಂದ ಆರಂಭವಾಗಲಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಆರಂಭವಾಗಲಿದ್ದು ಏ.4 ರವರೆಗೆ ನಡೆಯಲಿದೆ. 71 ಪರೀಕ್ಷಾ ಕೇಂದ್ರಗಳಲ್ಲಿ ಕೆಸ್ವಾನ್ ಮೂಲಕ ವೆಬ್‌ಕಾಸ್ಟಿಂಗ್ ಕಾರ್ಯ ಪೂರ್ಣಗೊಂಡಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.



ಜಿಲ್ಲೆಯಾದ್ಯಂತ ಈ ಬಾರಿ ಹೊಸ ವಿದ್ಯಾರ್ಥಿಗಳು 21429 ಹಾಗೂ ಪುನರಾವರ್ತಿತ ವಿದ್ಯಾರ್ಥಿಗಳು 1271 ಸೇರಿದಂತೆ ಒಟ್ಟು 22700 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಈಗಾಗಲೇ ಮಾರ್ಚ್ 12 ರಂದು 71 ಕೇಂದ್ರಗಳ ಮುಖ್ಯ ಅಧೀಕ್ಷಕರು ಹಾಗೂ ಪ್ರಶ್ನೆಪತ್ರಿಕೆ ಪಾಲಕರ ಸಭೆ ಕರೆದು ಎಲ್ಲಾ ಮಾಹಿತಿಯನ್ನು ನೀಡಲಾಗಿದೆ. ಪ್ರಸ್ತುತ ಎಲ್ಲಾ ಪರೀಕ್ಷಾ ಸಿದ್ದತಾ ಪ್ರಕ್ರಿಯೆಯನ್ನು ಪರಿಶೀಲಿಸುವ ಸಂಬಂಧ ಕೆಸ್ವಾನ್‌ನಲ್ಲಿ ವೆಬ್‌ಕಾಸ್ಟಿಂಗ್ ಸಿದ್ಧಪಡಿಸಿದ್ದು, ಕಾರ್ಯದ ಜವಾಬ್ದಾರಿಯನ್ನು ಜಿಪಂನ ಸಿಇಒ ನೊಂಗ್ಜಾಯ್ ಮೊಹಮ್ಮದ್ ಅಕ್ರಮ ಷಾ ಅಲಿ ಇವರು ಸಂಪೂರ್ಣ ನಿಗಾವಹಿಸುವರು ಎಂದು ತಿಳಿಸಿದ್ದಾರೆ.

# ಇಂದು ಉಜ್ಜನಿ, ನಿಂಬಳಗೇರಿ ಉಪ ಕೇಂದ್ರವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

■ **ಹಂಪಿ ಟೈಮ್ಸ್ ಕೊಟ್ಟೂರು**

ತಾಲೂಕಿನ ಉಜ್ಜಿನಿ ಮತ್ತು ನಿಂಬಳಗೇರಿ ವಿದ್ಯುತ್ ಉಪ ಕೇಂದ್ರಗಳಲ್ಲಿ 4ನೇ ತ್ರೈಮಾಸಿಕ ಕಾಮಗಾರಿ ಕೈಗೊಳ್ಳಲಾಗಿದೆ. ಈ ನಿಮಿತ್ತ ಎರಡೂ ಉಪ ಕೇಂದ್ರಗಳ ವ್ಯಾಪ್ತಿಯಲ್ಲಿ ಮಾರ್ಚ್–19ರಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆ ವರೆಗೆ ವಿದ್ಯುತ್ ಸರಬರಾಜುನಲ್ಲಿ ವ್ಯತ್ಯಯ ಆಗಲಿದೆ. ಉಭಯ ಕೇಂದ್ರ ವ್ಯಾಪ್ತಿಯ ಜೆಸ್ಕಾಂ ಗ್ರಾಹಕರು ಸಹಕರಿಸಬೇಕೆಂದು ಎಇಇ ಆರ್.ನಾಗರಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಾ. 20 ರಂದು ತ್ರೈಮಾಸಿಕ ಜಾಗೃತಿ ಉಸ್ತುವಾರಿ ಸಭೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಎಸ್ಸಿ, ಎಸ್ಟಿ ದೌರ್ಜನ್ಯ ನಿಯಂತ್ರಣ ನಿಯಮಗಳು 1995ರ ನಿಯಮ 17ರಂತೆ ಉಪವಿಭಾಗ ಮಟ್ಟದ 1ನೇ ತ್ರೈಮಾಸಿಕ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯನ್ನು ಮಾರ್ಚ್ 20 ರಂದು ಸಂಜೆ 4 ಗಂಟೆಗೆ ಹೊಸಪೇಟೆ ಸಹಾಯಕ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಸಹಾಯಕ ಆಯುಕ್ತರಾದ ವಿವೇಕಾನಂದ ಇವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಕರೆಯಲಾಗಿದೆ.




# ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ನೀಡಿ : ನ್ಯಾ.ಅಚಪ್ಪ ದೊಡ್ಡಬಸವರಾಜ



■ ಹಂಪಿ ಟೈಮ್ಸ್ ರಾಯಚೂರು

ಶಿಕ್ಷಣದಿಂದ ಮಾತ್ರ ಅಭಿವೃದ್ಧಿ ಹೊಂದಲು ಸಾಧ್ಯ. ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದರ ಮೂಲಕ ಬಾಲಕಾರ್ಮಿಕ ಪದ್ಧತಿ ಹೋಗಲಾಡಿಸಲು ಎಲ್ಲಾರು ಕೈಜೋಡಿಸಬೇಕೆಂದು ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಸಿಂಧನೂರು ತಾಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿಗಳಾದ ಅಚಪ್ಪ ದೊಡ್ಡಬಸವರಾಜ ಅವರು ಹೇಳಿದರು.

ಮಾ.18ರ ಮಂಗಳವಾರ ದಂದು ಜಿಲ್ಲೆಯ ಸಿಂಧನೂರಿನ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ತಾಲೂಕ ನ್ಯಾಯವಾದಿಗಳ ಸಂಘ, ತಾಲೂಕ ಆಡಳಿತ, ಕಾರ್ಮಿಕ ಇಲಾಖೆ, ತಾಲೂಕ ಪಂಚಾಯತಿ, ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಿಂಧನೂರು ಹಾಗೂ ಜಿಲ್ಲಾ ಬಾಲಕಾರ್ಮಿಕ ಯೋಜನೆ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಉಪಯೋಜನೆಯಡಿ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕತೆ ನಿರ್ಮೂಲನೆ ಹಾಗೂ ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಅಂಗವಾಗಿ ಕಾನೂನು ಅರಿವು ನೆರವು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಎಲ್ಲರೂ ಕಾನೂನು ಅರಿತು ತಮ್ಮ ಇತಿಮಿತಿಯಲ್ಲಿ ನಡೆದುಕೊಂಡರೆ ಸುಖ, ಶಾಂತಿ, ನೆಮ್ಮದಿಯ ಬದುಕು ನಡೆಸಬಹುದು. ಆದ್ದರಿಂದಲೇ ಎಲ್ಲ ಶಾಲೆ, ಕಾಲೇಜಿನ ವಿದ್ಯಾರ್ಥಿಗಳು, ಗೃಹಿಣಿಯರು, ವ್ಯಾಪಾರಸ್ಥರು, ಉದ್ಯೋಗಿಗಳು, ನೌಕರರು ಸೇರಿ ಎಲ್ಲ ವರ್ಗದವರಿಗೂ ಕಾನೂನಿನ ಅರಿವು ಮೂಡಿಸುವ ಕೆಲಸ ನಿರಂತರವಾಗಿ ನಡೆಯುತ್ತಿದೆ ಎಂದು ಹೇಳಿದರು.

ಈ ವೇಳೆ ವಕೀಲರಾದ ಎಸ್.ಎಸ್.ಖಾದ್ರಿ ಅವರು ಮಾತನಾಡಿ, ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಕುರಿತು ಉಪನ್ಯಾಸ ನೀಡುತ್ತಾ, ಗ್ರಾಹಕರು ಗ್ರಾಹಕರಿಗಿರುವ ಕಾನೂನಾತ್ಮಕ ಹಕ್ಕುಗಳು ಹಾಗೂ ಅವುಗಳ ಪ್ರಾಮುಖ್ಯತೆ ಬಗ್ಗೆ ತಿಳಿದುಕೊಳ್ಳಬೇಕು ಹಾಗೂ ಪ್ರತಿಯೊಂದು ವಸ್ತು ಖರೀದಿ ಮಾಡುವ ಸಂದರ್ಭದಲ್ಲಿ ವಸ್ತುವಿನ ಗುಣಮಟ್ಟವನ್ನು ಸರಿಯಾಗಿ ಪರಿಶೀಲನೆ ಮಾಡಿ ಖರೀದಿ ಮಾಡಬೇಕು ಎಂದು ತಿಳಿಸಿದರು.

ನಂತರ ಜಿಲ್ಲಾ ಬಾಲಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕರಾದ ಮಂಜುನಾಥ ರೆಡ್ಡಿ ಅವರು ಮಾತನಾಡಿ, ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ–1986 ಹಾಗೂ ತಿದ್ದುಪಡಿ ಕಾಯ್ದೆ–2016ರ ಕುರಿತು ಉಪನ್ಯಾಸ ನೀಡುತ್ತಾ, 14 ವರ್ಷದೊಳಗಿನ ಮಕ್ಕಳ ದುಡಿಮೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. 14 ವರ್ಷ ಮೇಲ್ಪಟ್ಟು 18 ವರ್ಷದೊಳಗಿನ ಮಕ್ಕಳ ದುಡಿಮೆಯನ್ನು ಅಪಾಯಕಾರಿ ವೃತ್ತಿ ಮತ್ತು ಪ್ರಕ್ರಿಯೆಗಳಲ್ಲಿ ನಿಷೇಧಿಸಲಾಗಿದೆ. ಒಂದು ವೇಳೆ ಅಂತಹ ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಂಡಲ್ಲಿ ತಪ್ಪಿತಸ್ಥ ಮಾಲೀಕರ ವಿರುದ್ಧ ಸಂಬಂಧ ಪಟ್ಟ ಪೊಲೀಸ್ ಠಾಣೆಯಲ್ಲಿ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ–1986 ಮತ್ತು ತಿದ್ದುಪಡಿ ಕಾಯ್ದೆ–2016 ರಡಿ ಪ್ರಕರಣ ದಾಖಲಿಸಲಾಗುವುದು ಎಂದು ತಿಳಿಸಿದರು. ದುಡಿಯುವ ಮಕ್ಕಳು ಎಲ್ಲಿಯಾದರೂ ಕಂಡು ಬಂದಲ್ಲಿ ಸಾರ್ವಜನಿಕರು ತಕ್ಷಣ ಮಕ್ಕಳ ಸಹಾಯವಾಣಿ ಸಂಖ್ಯೆ 1098/112 ಗೆ ಉಚಿತವಾಗಿ ಕರೆ ಮಾಡಿ ಮಾಹಿತಿ ನೀಡುವ ಮೂಲಕ ಸಮಾಜದಲ್ಲಿ ಬಾಲಕಾರ್ಮಿಕ ಪದ್ಧತಿ ಎಂಬ ಪಿಡುಗನ್ನು ಹೋಗಲಾಡಿಸಲು ಹಾಗೂ ಜಿಲ್ಲೆಯನ್ನು ಬಾಲಕಾರ್ಮಿಕ ಮುಕ್ತ ಜಿಲ್ಲೆಯನ್ನಾಗಿ ನಿರ್ಮಿಸಲು ಸಾರ್ವಜನಿಕರ ಸಹಕಾರ ಅತ್ಯಗತ್ಯ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ತಾಲೂಕ ನ್ಯಾಯವಾದಿಗಳ ಸಂಘದ ಅಧ್ಯಕ್ಷರಾದ ಎನ್. ರಾಮನಗೌಡ ವಕೀಲರು, ಕಾರ್ಮಿಕ ನಿರೀಕ್ಷಕರು ವಿಜಯಲಕ್ಷ್ಮೀ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ಅಶೋಕ ತುರ್ವಿಹಾಳ ಇತರರಿದ್ದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–

ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಆಸ್ತಿಗಿಂತ ಸಂಬಂಧಗಳ ಗಳಿಕೆ ಹೆಚ್ಚಾಗಲಿ ಸಂಬಂಧಗಳನ್ನು ಉಳಿಸಿ - ಬೆಸೆಯೋಣ



ಇಂದಿನ ದಿನಗಳಲ್ಲಿ ಮನುಷ್ಯ ಆಸ್ತಿ ಅಂತಸ್ತು ಕಳೆದುಕೊಂಡು ಬಡವನಾಗುತ್ತಿಲ್ಲ. ಆದರೆ ಇದಕ್ಕಿಂತ ಅಮೂಲ್ಯವಾದ ಸಂಬಂಧ. ಎನ್ನುವ ಅಂತಸ್ಥನ್ನು ಕಳೆದುಕೊಂಡು ನಿಜವಾಗಿಯೂ ಬಡವನಾಗಿದ್ದಾನೆ. ಪ್ರಸ್ತುತ ಕಾಲದಲ್ಲಿ ನಮ್ಮ ಯುವ ಪೀಳಿಗೆ ಸಂಬಂಧ ಅಂದರೆ ಏನು..? ಎಂದು ಕೇಳುವ ಮಟ್ಟದಲ್ಲಿ ನಾವು ಸಂಬಂಧಗಳನ್ನು ಉಳಿಸಿಕೊಳ್ಳುತ್ತಿದ್ದೇವೆ. ಇವತ್ತಿನ ಸಂಬಂಧಗಳು ಹಾಯ್.... ಬಾಯ್.. ಹಲೋ...ಆಂಟಿ.. ಅಂಕಲ್ ವರೆಗೆ ಬಂದು ನಿಂತಿವೆ. ಮೊದಲೆಲ್ಲಾ ಅಪರಿಚಿತರು ಸಿಕ್ಕರೂ ಕೂಡ ಜನ ಅವರನ್ನು ಮಾತನಾಡಿಸಿ ಯೋಗ ಕ್ಷೇಮಗಳನ್ನ ಕೇಳಿ ಸಂಬಂಧಗಳನ್ನು ಬೆಳೆಸಿ ಗಟ್ಟಿಗೊಳಿಸುತ್ತಿದ್ದರು. ಆದರೆ ಒಂದು ಕುಟುಂಬದಲ್ಲಿರುವ ಮನುಷ್ಯರೇ... .ತಮ್ಮ ಸಂಬಂಧದ ಅರಿವಿಲ್ಲದೆ ಬದುಕುತ್ತಿದ್ದಾರೆ ಇದು ಇವತ್ತಿನ ವಾಸ್ತವ. ಸಂಬಂಧಗಳ ಬೆಲೆ ತಿಳಿಯಬೇಕಾದರೆ ಒಂದು ವಾರ ಅನಾಥಾಶ್ರಮದಲ್ಲಿ ಇದ್ದು ಬರಬೇಕು ಆಗ ಸಂಬಂಧಗಳ ಬೆಲೆ ತಿಳಿಯುತ್ತದೆ. ಉತ್ತಮ ಸಂಬಂಧಗಳಿಂದ, ಮಾತ್ರ ನಾವು ನೆಮ್ಮದಿ ಪಡೆಯಲು ಸಾಧ್ಯ. ನಾವು ಬೆಳೆಸಿಕೊಂಡ ಸಂಬಂಧಗಳು ತಾವಾಗಿಯೇ ಅಳಿಸಿ ಹೋಗುವುದಿಲ್ಲ ನಮ್ಮ ನಡೆ ನುಡಿ ಅಳಸಿ ಹೋಗುವಂತೆ ಮಾಡುತ್ತದೆ. ಸಂಬಂಧಗಳು ಶಾಶ್ವತವಾಗಿ ಇರಬೇಕೆಂದರೆ ನಮ್ಮ ನಡೆಯ ನುಡಿ ಶುದ್ಧವಾಗಿರಬೇಕು. ಹಾಗಾದರೆ ಬನ್ನಿ ಸ್ನೇಹಿತರೆ. ಸಂಬಂಧಗಳ ಬಗ್ಗೆ ಸ್ವಲ್ಪ ಇಣುಕು ನೋಟ ನೋಡೋಣ.

**ಸಂಬಂಧಗಳು ಬಯಸುವುದು ಏನನ್ನ.....?**

ಜೀವನದಲ್ಲಿ ಎಷ್ಟು ಸಂಬಂಧಗಳು ಇವೆ ಎನ್ನುವುದು ಮುಖ್ಯವಲ್ಲ. ಎಷ್ಟು ಸಂಬಂಧಗಳಿಗೆ ಜೀವ ಇದೆ ಎನ್ನುವುದು ಮುಖ್ಯ. ಪ್ರೀತಿ ಒಂದು ಇದ್ದರೆ ಸಾಕು, ಕೊನೆಯವರೆಗೂ ಸಂಬಂಧಗಳು ಉಳಿಯುತ್ತವೆ ಎನ್ನುವುದು ಸುಳ್ಳು. ಆದರೆ ಬಹುತೇಕ ಜನರಿಗೆ ಗೊತ್ತಿಲ್ಲ ಸಂಬಂಧಗಳು ಬೇಡುವುದು ಪ್ರೀತಿಯನ್ನಲ್ಲ. ನಂಬಿಕೆಯನ್ನ. ಪ್ರೀತಿ ಇರದಿದ್ದರೂ ಜೊತೆಯಾಗಿರಲು ಸಾಧ್ಯ. ಆದರೆ ನಂಬಿಕೆ ಎನ್ನುವುದು ಇದೆಯಲ್ಲ ಅದು ಒಂದು ಇಲ್ಲವಾದರೆ, ಮನುಷ್ಯ ಒಂದೇ ಒಂದು ರಾತ್ರಿ ನೆಮ್ಮದಿಯಾಗಿ ಇರಲು ಸಾಧ್ಯವಿಲ್ಲ. ನಂಬಿಕೆ ಕಳೆದುಕೊಂಡ ಸಂಬಂಧ ಊಟ ಮಾಡಿಬಿಟ್ಟ ಬಾಳೆ ಎಲೆಯಂತೆ. ಮತ್ತೆ ಊಟ ಮಾಡಲು ಆಗುವುದಿಲ್ಲ ಕೇವಲ ಬಿಸಾಡಬಹುದು ಅಷ್ಟೇ. ನಂಬಿಕೆ ಎನ್ನುವುದು.. ತ್ಯಾಗ, ಪ್ರೀತಿಗಳ, ಸಂಕೇತ ಸ್ನೇಹ ಸಂಬಂಧಗಳ ಬೆಸುಗೆ.

**ತಾಯಿ ಮಾತೃ ಸಂಬಂಧ**

ಅಮ್ಮ, ಮಾತೃ, ತಾಯಿಯ ಸಂಬಂಧವು ಮಾನವ ಸಂಬಂಧಗಳಲ್ಲಿ ತುಂಬಾ ಮೌಲ್ಯವುಳ್ಳದಾಗಿದೆ. ದೇವರು ಎಲ್ಲಾ ಕಡೆ ಇರಲಾಗುವುದಿಲ್ಲ ಆದುದರಿಂದಲೇ ತಾಯಿಯ ರೂಪದಲ್ಲಿ ಕಳುಹಿಸಿದ್ದಾನೆ. ಅಮ್ಮನ ಪ್ರೀತಿ. ಕರುಣೆ. ಸಹನೆ. ನಮ್ಮ ಮನಸ್ಸನ್ನು ಆವರಿಸುತ್ತವೆ. ಅನೇಕ ವಿಶೇಷ ಗುಣಗಳನ್ನು ತನ್ನ ಮಡಿಲಿನಲ್ಲಿ ಇಟ್ಟುಕೊಳ್ಳುವವಳೇ ತಾಯಿ. ಕೆಟ್ಟ ಮಕ್ಕಳನ್ನು ನೋಡಬಹುದು ಆದರೆ ಕೆಟ್ಟ ತಾಯಿಯನ್ನು ನೋಡಲಾಗದು ಎನ್ನುವ ಮಾತು ಇದೆ. ಆದುದರಿಂದ ಪ್ರತಿಯೊಬ್ಬರು ತಾಯಿ.... ಅಮ್ಮ.. ಮಾತೇಯನ್ನ ಗೌರವಿಸೋಣ... ಕೋಟಿ ಜನ್ಮ ಹೆತ್ತು ಬಂದರು ತಾಯಿಯ ಋಣ ತೀರಿಸಲಾಗದು. ಆದ್ದರಿಂದ ತಾಯಿಯ ಮಹತ್ವವನ್ನ ಅರಿಯೋಣ ಮುಂದಿನ ಪೀಳಿಗೆಗೆ ತಾಯಿಯ ಮಹತ್ವವನ್ನು ತಿಳಿಸುತ್ತಾ ಈ ಸಂಬಂಧವನ್ನು ಗಟ್ಟಿಗೊಳಿಸೋಣ.

**ಸೋದರ– ಸಹೋದರಿ ಸಂಬಂಧ**

ಅಣ್ಣ– ತಮ್ಮ, ಅಕ್ಕ– ತಂಗಿ,, ಒಂದು ಮಧುರವಾದ ಸಂಬಂಧ.... ಸೋದರ ಸಂಬಂಧಗಳೊಂದಿಗಿನ ಸಂಬಂಧ ಸೊಗಸಾಗಿದಷ್ಟು...



ಡಾ ಪ್ರಸನ್ನ ನಾಡಿಗರ್
9900550684
Scan For Digital Colourful
HAMPI TIMES E-paper

ನಮಗೆ ಹೆಚ್ಚಾಗಿ ಲಭಿಸುತ್ತದೆ. ನಮ್ಮ ಕಷ್ಟ.. ಸುಖ.. ದುಃಖಗಳಲ್ಲಿ ಸೋದರ ಸಂಬಂಧಗಳ ಪಾತ್ರ ಬಹಳ ಮಹತ್ವದ್ದಾಗಿರುತ್ತದೆ. ಆದ್ದರಿಂದ ಸಹೋದರರನ್ನು.... ಸಹೋದರಿಯನ್ನ.... ಗೌರವ... ಪ್ರೀತಿ... ವಿಶ್ವಾಸದಿಂದ ಕಾಣೋಣ ಇದು ಸೋದರ ಸಂಬಂಧವನ್ನು ಗಟ್ಟಿಗೊಳಿಸುತ್ತದೆ. ಸೋದರ ಸೋದರಿಯ ಮಹತ್ವ. ನಮ್ಮ ಜೀವನದಲ್ಲಿ ಅವರ ಪಾತ್ರ ಅರಿತು, ಮುಂದಿನ ಪೀಳಿಗೆಗೆ ತಿಳಿಸಿ ಕೊಡುತ್ತಾ ಈ ಸಂಬಂಧವನ್ನು ಗಟ್ಟಿಗೊಳಿಸೋಣ.

**ಗಂಡ –ಹೆಂಡತಿ ಸಂಬಂಧ**

ಗಂಡ ಹೆಂಡತಿ ಸಂಬಂಧ ಎರಡು ಹೇಗೆ ಸೇರಿವೆ ಅಂದರೆ ದೀಪ ಮತ್ತು ಬತ್ತಿತರ ಯಾವುದು ಕಮ್ಮಿಯಲ್ಲ... ಯಾವುದು ಹೆಚ್ಚಲ್ಲ....ಎರಡರ ಅಧಿಕಾರ ಸಮಾನವಾಗಿರುತ್ತದೆ. ಬದುಕಿನ ಬಂಡಿ ಸಾಗಬೇಕೆಂದರೆ ಗಂಡ ಹೆಂಡತಿ ಎಂಬ ಎರಡು ಚಕ್ರಗಳು ಸರಿಯಾಗಿ ನಡೆಯುತ್ತಿರಬೇಕು. ಒಬ್ಬರನ್ನೊಬ್ಬರು ಅರ್ಥ ಮಾಡಿಕೊಂಡರೆ ಜೀವನ ಸುಖಮಯ. ಗಂಡನ ಕಷ್ಟದಲ್ಲಿ ಹೆಂಡತಿ ಕೈಜೋಡಿಸಬೇಕು ಹಾಗೂ ಹೆಂಡತಿಯ ಮಾತಿಗೆ ಗಂಡನು ಗೌರವಿಸಬೇಕು. ಹೀಗಿದ್ದಾಗ ಈ ಸಂಬಂಧ ಯಾವಾಗಲೂ ಚೆನ್ನಾಗಿ.. ಶಾಶ್ವತವಾಗಿ...ಮಾದರಿ ಯಾಗಿರುತ್ತದೆ.. ಈ ಎರಡು ಸಂಬಂಧದಲ್ಲಿ ಒಂದು ಸರಿ ಇಲ್ಲದಿದ್ದರೆ ಕುಟುಂಬದ ಅರ್ಥವೇ ಕೆಟ್ಟುಹೋಗುತ್ತದೆ. ಆದ್ದರಿಂದ ಗಂಡ ಹೆಂಡತಿಯ ಸಂಬಂಧದ ಮಹತ್ವ.. ಅರ್ಥ ಪ್ರಾಮುಖ್ಯತೆಯನ್ನು ನಾವು ತಿಳಿಯುತ್ತಾ ಮುಂದಿನ ಪೀಳಿಗೆಗೆ ತಿಳಿಸುತ್ತಾ ಈ ಸಂಬಂಧವನ್ನು ನಾವು ಗಟ್ಟಿಗೊಳಿಸೋಣ.....

**ಬಂಧು– ಬಳಗದ ಸಂಬಂಧ**

ಬಂದು –ಬಳಗದ, ಸಂಬಂಧವು ನಾಲ್ಕು ಗೋಡೆಯ ನಡುವಿನ ಸಂಬಂಧವನ್ನು ಅನೇಕ ಕುಟುಂಬಗಳಿಗೆ ವಿಸ್ತರಿಸುವವರೇ ನಮ್ಮ ಬಂಧು–ಬಳಗದವರು. ಬಂದು–ಬಳಗದೊಳಗದಿಂದ, ಉತ್ತಮ ಒಡನಾಟವು. ಈ ಜಗತ್ತಿನಲ್ಲಿ ನಾವು ಒಂಟಿಯಲ್ಲ ಎನ್ನುವ ಭಾವನೆ ನೀಡುತ್ತದೆ. ಜಗತ್ತಿನಲ್ಲಿ ನಾವು ಯಾವ ರೀತಿ ಇದ್ದೇವೆ ಎಂದು ಈ ಬಂಧು ಬಳಗ ತೋರಿಸುತ್ತದೆ ಆದ್ದರಿಂದ ಬಂದು ಬಳಗದವರೊಂದಿಗೆ ಉತ್ತಮ ಪ್ರೀತಿ. ಬಾಂಧವ್ಯಗಳನ್ನ ಹೊಂದುತ್ತಾ ಅದರ ಮಹತ್ವವನ್ನು ತಿಳಿಯುತ್ತ. ಮುಂದಿನ ಪೀಳಿಗೆಗೆ ಅದನ್ನ ತಿಳಿಸುತ್ತಾ ಈ ಸಂಬಂಧವನ್ನು ಗೌರವಿಸೋಣ....

**ಸ್ನೇಹಿತರ ಸಂಬಂಧ**

ಸ್ನೇಹ ಅತಿ ಮಧುರ, ಸ್ನೇಹ ಅದು ಅಮರ. ಉತ್ತಮ ಸ್ನೇಹಿತರು ನಮ್ಮವರಾದರೆ ನಾವು ಉತ್ತಮರೆಂದು ಬೇರೆಯವರ ನಮ್ಮನ್ನು ಗುರುತಿಸುತ್ತಾರೆ. ಒಳ್ಳೆಯ ಸ್ನೇಹಿತರನ್ನು ಆರಿಸಿಕೊಳ್ಳಿ.ಕುಟುಂಬದವ ರೊಡನೆ ಹಂಚಿಕೊಳ್ಳಲಾಗದ ಅನೇಕ ವಿಷಯಗಳಿಗೆ ಸ್ನೇಹಿತರೆ ಆಸರೆಯಾಗುತ್ತಾರೆ. ಕಷ್ಟಕಾಲದಲ್ಲಿ ನೆರವಾಗುವವನೇ ನಿಜವಾದ ಸ್ನೇಹಿತನು ಆಗಿರುತ್ತಾನೆ. ಲಾಭ ನಿರೀಕ್ಷಿಸಿ ಬೆಳೆಸುವ ಸ್ನೇಹ ಹೆಚ್ಚು ದಿನ ನಿಲ್ಲುವುದಿಲ್ಲ. ಸ್ನೇಹಿತರು ಹಾಗೂ ಪರಿಚಿತರ ನಡುವೆ ಸಾಕಷ್ಟು ವ್ಯತ್ಯಾಸವಿದೆ ನಮಗೆ ಅನೇಕರು ಪರಿಚಯ ಇರಬಹುದು ಆದರೆ ಬೆರಳೆಣಿಕೆಯಷ್ಟು ಮಾತ್ರವೇ ನಿಜವಾದ ಸ್ನೇಹಿತರಿರುತ್ತಾರೆ ಆದ್ದರಿಂದ ಸ್ನೇಹದ ಮಹತ್ವ ಅರ್ಥ ತಿಳಿದು ಅದನ್ನು ಮುಂದಿನ ಪೀಳಿಗೆಗೆ ತಿಳಿಸಿ. ಈ ಸಂಬಂಧವನ್ನು ನಾವೆಲ್ಲರೂ ಗೌರವಿಸೋಣ....

**ಸಾರ್ವಜನಿಕ ಸಂಬಂಧ**

ಮನುಷ್ಯ ಸಂಘ ಜೀವಿ... ನಾವು ಸಮಾಜದೊಂದಿಗೆ ಬದುಕಬೇಕು. ಸಮಾಜದೊಳಗೆ ವ್ಯವಹಾರ ಮಾಡಬೇಕು. ಮತ್ತು ಸಮಾಜದಲ್ಲಿ ನಾವು ಚೆನ್ನಾಗಿ ಬದುಕಿ ಬಾಳಬೇಕೆಂದರೆ, ಸಾರ್ವಜನಿಕ ಸಂಬಂಧ ಚೆನ್ನಾಗಿರಬೇಕು ನಾವು ಭೇಟಿ ಮಾಡುವ ಸಮಾಜದ ವಿವಿಧ ಸ್ತರದ ವ್ಯಕ್ತಿಗಳೊಂದಿಗೆ ನಾವು ಉತ್ತಮ ಸಂಬಂಧವನ್ನು ಹೊಂದಿದ್ದರೆ ಮಾತ್ರ.. ವ್ಯವಹಾರ ಸುಲಭ ಸಾಧ್ಯ. ಇಲ್ಲಿ ಪರಸ್ಪರ ಸಹಕಾರ.. ಸಹಬಾಳ್ವೆಯಿಂದ ಜೀವನ ನಡೆಸಬೇಕೆ ಹೊರತು ಜಗಳ ವೈಶಮ್ಯಗಳಿಗೆ ಆಸ್ಪದ ನೀಡಬಾರದು. ಕೊಟ್ಟು ತೆಗೆದುಕೊಳ್ಳುವ ನೀತಿಯನ್ನು ಅನುಸರಿಸುವುದರ ಮೂಲಕ ಸಮಾಜದೊಂದಿಗೆ ಉತ್ತಮ ಬಾಂಧವ್ಯ ಹೊಂದಿರಬೇಕು. ಇಂತಹ ಅಮೂಲ್ಯವಾದ ಸಂಬಂಧದ ಮಹತ್ವವನ್ನ ತಿಳಿಯುತ್ತ ಮುಂದಿನ ಪೀಳಿಗೆಗೆ ತಿಳಿಸುತ್ತಾ ಈ ಸಂಬಂಧವನ್ನು ನಾವು ಗೌರವಿಸೋಣ.

**ಗುರುಗಳ ಸಂಬಂಧ**

ವರುಣ ಮಾತ್ರಂ ಕಲಿಸಿದಾತಂ ಗುರು.... ಎಂಬಂತೆ ವಿದ್ಯಾಭ್ಯಾಸದ ಯಾವುದೇ ಹಂತದಲ್ಲಿ ಆದರೂ ವಿದ್ಯೆ ಕಲಿಸಿದ ಗುರುವಿಗೆ ವಿಧೇಯರಾಗಿದ್ದು, ಗುರು ಶಿಷ್ಯರ ನಡುವೆ ಉತ್ತಮ ಸಂಬಂಧ ಹೊಂದುವುದರಿಂದ ಮಾತ್ರ ಜ್ಞಾನ ವೃದ್ಧಿಯಾಗುತ್ತದೆ. ನಮ್ಮ ಜ್ಞಾನವನ್ನು ವೃದ್ಧಿಸಲು ನೆರವಾಗುವ ವ್ಯಕ್ತಿಗಳೇ ಪಾಠ ಹೇಳಿಕೊಡುವ ಗುರುಗಳು.... ಗುರುವಿನಲ್ಲಿ ಗೌರವ, ಭಕ್ತಿ. ಶ್ರದ್ಧೆಯಿಂದ ಗುರುವನ್ನು ಗೌರವಿಸೋಣ. ಪ್ರಸ್ತುತ ದಿನಗಳಲ್ಲಿ ಗುರು ಮತ್ತು ಶಿಷ್ಯರ ಸಂಬಂಧ ವ್ಯಾಪಾರ ವಹಿವಾಟಾಗಿದೆ..... ಆದರೆ ನಿಜವಾದ ಗುರುವಿನ ಮಹತ್ವ. ನಾವು ಅರಿತು ಮುಂದಿನ ಪೀಳಿಗೆಗೆ ಗುರುವಿನ ಮಹತ್ವ. ಸ್ಥಾನ. ಗೌರವವನ್ನು ತಿಳಿಸುತ್ತಾ ಈ ಸಂಬಂಧವನ್ನು ನಾವೆಲ್ಲರೂ ಗೌರವಿಸೋಣ

ಹಿರಿಯರ ಸಂಬಂಧ

ಭಾರತೀಯ ಕುಟುಂಬ ವ್ಯವಸ್ಥೆಯು ಇಡಿ ಪ್ರಪಂಚದಲ್ಲಿಯೇ ಅತ್ಯಂತ ವಿಶಿಷ್ಟ ಗೌರವ ಸ್ಥಾನಮಾನವನ್ನು ಪಡೆದಿದೆ. ಇದಕ್ಕೆ ಕಾರಣ ಭಾರತದಲ್ಲಿನ ಅವಿಭಕ್ತ ಕುಟುಂಬದ ಪರಿಪಾಲನೆ. ಆದರೆ ಈಗಿನ ಕಾಲದಲ್ಲಿ ಪಾಶ್ಚಾತ್ಯ ಜೀವನಶೈಲಿಯಿಂದ ಈ ವ್ಯವಸ್ಥೆ ದೂರವಾಗುತ್ತಿದೆ. ಹಿರಿಯರು ನಮಗಾಗಿ ಅವರ ಜೀವನವನ್ನೇ ತೆಯಿದಿರುತ್ತಾರೆ. ಆ ಋಣವನ್ನು ನಾವು ತೀರಿಸುವುದು ಸಾಧ್ಯವಿಲ್ಲವಾದರೂ, ಅವರಿಗೆ ನಾವು ನೆಮ್ಮದಿಯಿಂದ ಇರುವಂತೆ ನೋಡಿಕೊಳ್ಳಬೇಕು. ಹಿರಿಯರ ಅನುಭವ ನಮ್ಮ ಜೀವನದ ಅನೇಕ ಕಷ್ಟಗಳನ್ನ ಎದುರಿಸಲು ಮಾದರಿಯಾಗುತ್ತದೆ. ಆದ್ದರಿಂದ ಹಿರಿಯರನ್ನ ಗೌರವಿಸಿ ಅವರ ಮಹತ್ವವನ್ನು ತಿಳಿದು ಮುಂದಿನ ಪೀಳಿಗೆಗೆ ಅವರ ಮಹತ್ವವನ್ನ ತಿಳಿಸುತ್ತಾ ಈ ಸಂಬಂಧವನ್ನು ನಾವು ಗೌರವಿಸೋಣ.....

**ಸಹೋದ್ಯೋಗಿಗಳ ಸಂಬಂಧ**

ಕಾಯಕವೇ ಕೈಲಾಸ ಎಂದು ಬಸವಣ್ಣನವರು ಹೇಳಿದ್ದಾರೆ. ಪ್ರತಿಯೊಬ್ಬರು ಈ ಭೂಮಿಗೆ ಬಂದ ಮೇಲೆ ಒಂದು ವೃತ್ತಿ ಮಾಡಲೇ ಬೇಕು. ಈ ವೃತ್ತಿಯಜೀವನ ಯಶಸ್ವಿಯಾಗಿ ಸಾಗಬೇಕಾದರೆ ಉತ್ತಮ ಸಹೋದ್ಯೋಗಿಗಳು ಇರಬೇಕು. ಇವರು ಉತ್ತಮವಾಗಿ ಇರಬೇಕೆಂದರೆ ನಮ್ಮಗಳ ನಡುವೆ ಉತ್ತಮ ಬಾಂಧವ್ಯವಿರಬೇಕು. ನಾವು ಕೆಲಸ ಮಾಡುವ ಸ್ಥಳದಲ್ಲಿ ಯಶಸ್ಸನ್ನು ಕಾಣಬೇಕೆಂದರೆ, ನಮ್ಮ ಕೆಲಸದ ಜೀವನ ಉತ್ತಮವಾಗಿ ಸಾಗಬೇಕೆಂದರೆ ಸಹೋದ್ಯೋಗಿಗಳೊಂದಿಗೆ ಸಂಬಂಧ ಉತ್ತಮವಾಗಿರಬೇಕು... ಸಹೋದ್ಯೋಗಿಗಳೊಂದಿಗೆ ಉತ್ತಮ ಬಾಂಧವ್ಯ, ಪ್ರೀತಿ, ವಿಶ್ವಾಸವನ್ನು ಬೆಳೆಸುತ್ತಾ ಪರಸ್ಪರ ಸಹಕಾರ ಸ್ನೇಹದಿಂದ ವರ್ತಿಸುತ್ತಾ ಈ ಸಂಬಂಧವನ್ನು ಉಳಿಸೋಣ ಮತ್ತು ಗೌರವಿಸೋಣ.....

**ಕೊನೆಯ ಮಾತು**

ಜೀವನ ಸುಂದರವಾದ ಸುಳ್ಳು,, ಕಹಿಯಾದ ಸತ್ಯ. ನಾವು ಯಾರ ಮೇಲೆ ಅತಿ ಹೆಚ್ಚು ನಂಬಿಕೆ ಇಟ್ಟು ಅವರೊಂದಿಗೆ ಮನದಾಳದ ಮಾತನ್ನು ಹೇಳಿಕೊಳ್ಳುತ್ತೇವೆ ಅವರೇ ನಮಗೆ ಮೋಸ ಮಾಡುತ್ತಾರೆ! ಒಂದು ವೇಳೆ ಸಮಯ ಸರಿಯಿತ್ತು ಎಂದರೆ. ಎಲ್ಲರೂ ನಮ್ಮವರೇ, ಅದೇ ಸಮಯ ಸರಿ ಇಲ್ಲವೆಂದರೆ ಯಾರು ನಮ್ಮವರಲ್ಲ. ಒಬ್ಬರು ದೂರ ಇದ್ದ ತಕ್ಷಣ ಸಂಬಂಧ ಹಾಳಾಗುವುದಿಲ್ಲ. ಹತ್ತಿರ ಇದ್ದ ತಕ್ಷಣ ಸಂಬಂಧ ಬಿಸಿಯುವುದಿಲ್ಲ. ಯಾರು ಎಷ್ಟು ಚೆನ್ನಾಗಿ ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡಿದ್ದಾರೆ ಎನ್ನುವುದರ ಮೇಲೆ ಸಂಬಂಧಗಳು ಗಟ್ಟಿಯಾಗಿರುತ್ತವೆ. ಒಳ್ಳೆಯ ಸಂಬಂಧ ಎನ್ನುವುದು ಜೀವನದ ಆಸ್ತಿ. ಹಾಗಾಗಿ ಯಾವತ್ತಿಗೂ ಯಾರನ್ನು ದೂರ ಮಾಡಿಕೊಳ್ಳಬೇಡಿ.

# ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸರ್ಕಾರದ ಸಾಧನೆಗಳಿಗೆ ಕನ್ನಡಿ ಹಿಡಿದಿದ್ದಾರೆ. ಸಂಪೂರ್ಣ ಸತ್ಯ ಹೇಳಿದ್ದಾರೆ : ಸಿ.ಎಂ

**ಬೆಂಗಳೂರು:** ವಂದನಾನಿರ್ಣಯದ ಮೇಲೆ ಸುಮಾರು ವಿರೋಧಪಕ್ಷದ ನಾಯಕರು ಸೇರಿದಂತೆ 16 ಜನ ಸದಸ್ಯರು ಸುಮಾರು 9ಗಂಟೆ 56 ನಿಮಿಷಗಳ ಕಾಲ ತಮ್ಮ ಅಭಿಪ್ರಾಯವನ್ನು ಮಂಡಿಸಿದ್ದಾರೆ. ಸದಸ್ಯರ ಟೀಕೆಗಳು, ಸಲಹೆ ಸೂಚನೆಗಳನ್ನು ನಾನು ಸ್ವಾಗತಿಸುತ್ತೇನೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರಗಳಿಗೆ ಸರಿದಾರಿ ತೋರಲು ಟೀಕೆಗಳು ಇರಬೇಕು. ಸತ್ಯವನ್ನು ಮರೆಮಾಚಿ ಟೀಕೆ ಮಾಡಬಾರದು. ಇದು ಪ್ರಜಾಪ್ರಭುತ್ವದ ಆರೋಗ್ಯಕ್ಕೆ ಮಾರಕ. ವಾಸ್ತವಾಂಶಗಳ ಮೇಲೆ ಬೆಳಕು ಚೆಲ್ಲಬೇಕು. ದಾಖಲಾತಿಗಳನ್ನು ಸದನದ ಮುಂದಿಡಬೇಕು. ಈ ರೀತಿಯನ್ನು ನಾನೆಂದಿಗೂ ಸ್ವಾಗತಿಸುತ್ತೇನೆ.

ಸರ್ಕಾರದ ಕಳೆದೊಂದು ವರ್ಷದ ಸಾಧನೆಗಳನ್ನು ರಾಜ್ಯಪಾಲರ ಭಾಷಣದ ಮೂಲಕ ಪ್ರಸ್ತಾಪಿಸಲು ಸಾಧ್ಯವಿಲ್ಲದಿದ್ದರೂ , ಈ ನಿಟ್ಟಿನಲ್ಲಿ ಪ್ರಯತ್ನಿಸಲಾಗಿದೆ. ಇತ್ತೀಚೆಗೆ ಹೆಚ್ಚು ವಿದ್ಯಾವಂತರು , ವಿಚಾರವಂತರು ಕೆಳಮನೆ ಹಾಗೂ ಮೇಲ್ಮನೆಗೂ ಬರುತ್ತಿರುವುದರಿಂದ, ಚರ್ಚೆಗಳ ಮಟ್ಟ ಎತ್ತರಕ್ಕೆ ಹೋಗಬೇಕೇ ವಿನ: ಗುಣಮಟ್ಟ ಇಳಿಯಬಾರದು.

2023ರ ಮೇ ಚುನಾವಣೆಯಲ್ಲಿ ರಾಜ್ಯದ ಜನ ಕಾಂಗ್ರೆಸ್ ಪಕ್ಷವನ್ನು 136 ಸ್ಥಾನಗಳನ್ನು ನೀಡಿ ಗೆಲ್ಲಿಸಿದರು. ಅದರ ನಂತರ 2024 ರಲ್ಲಿ ಲೋಕಸಭೆ ಚುನಾವಣೆ ನಡೆದು, ಜನರು ನಮಗೆ ಹೆಚ್ಚಿನ ಆಶೀರ್ವಾದ ಮಾಡಿದರು. ನಂತರ ನಡೆದ ಚೆನ್ನಪಟ್ಟಣ, ಶಿಗ್ಗಾಂವಿ, ಸಂಡೂರಿನಲ್ಲಿ ನಡೆದ ಉಪಚುನಾವಣೆಗಳಲ್ಲಿ ದೊಡ್ಡ ಅಂತರದಿಂದ ಗೆಲುವು ಸಾಧಿಸಿದೆವು. ಚೆನ್ನಪಟ್ಟಣದಲ್ಲಿ 25 ಸಾವಿರ , ಶಿಗ್ಗಾಂಇ 13 ಸಾವಿರ, ಸಂಡೂರಿನಲ್ಲಿ 9 ಸಾವಿರ ಅಂತರದಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿತು. ಕನ್ನಡ ನಾಡಿನ ಜನ ಕಾಂಗ್ರೆಸ್ ಸರ್ಕಾರವನ್ನು ಒಪ್ಪಿಕೊಂಡಿದ್ದಾರೆ. ಚುನಾವಣೆ ಪೂರ್ವದಲ್ಲಿ 2022 ರಲ್ಲಿ ಐದು ಗ್ಯಾರಂಟಿ ಯೋಜನೆಗಳನ್ನು ಘೋಷಿಸಿದ್ದೆವು. 2023ರಲ್ಲಿ ಜೂನ್ 11 ರಲ್ಲಿ ಶಕ್ತಿ ಯೋಜನೆಯನ್ನು ವಿಧಾನಸೌಧದಲ್ಲಿ , ಜುಲೈ ತಿಂಗಳಲ್ಲಿ ಅನ್ನಭಾಗ್ಯ, ಗೃಹಜ್ಯೋತಿಗಳನ್ನು ಜಾರಿ ಮಾಡಲಾಯಿತು. ಆಗಸ್ಟ್ 1 ರಂದು ಮೈಸೂರಿನಲ್ಲಿ ಗೃಹಲಕ್ಷ್ಮಿಯನ್ನು ಜಾರಿ ಮಾಡಲಾಯಿತು. ಡಿಸೆಂಬರ್ ನಲ್ಲಿ ಶಿವಮೊಗ್ಗದಲ್ಲಿ ಯುವನಿಧಿಯನ್ನು ಪ್ರಾರಂಭಿಸ ಲಾಯಿತು. ಗ್ಯಾರಂಟಿ ಯೋಜನೆಗಳನ್ನು ಒಂದು ವರ್ಷದ ಒಳಗೆಯೇ ಜಾರಿ ಮಾಡಲಾಯಿತು. ಜನರಿಗೆ ನೀಡಿದ ಭರವಸೆಗಳನ್ನು ಈಡೇರಿಸಿ ನುಡಿದಂತೆ ನಡೆದಿದ್ದೇವೆ. ಜನರಿಗೆ ಕೊಟ್ಟ ಮಾತನ್ನು ಉಳಿಸಿಕೊಂಡಿದ್ದೇವೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಅಪರೂಪದ ಸ್ನೇಹ

ಬೃಹದಾಕಾರದ ಮರವೊಂದು
ಉರುಳಿರಲು
ಪ್ರಾಣಿ ಪಕ್ಷಿಗಳಿಗೆ ಆಸರೆ ಮರೆಯಾಗಿರಲು
ಪೊಟ್ಟರೆಯೊಳಗಿಂದ ಇಣುಕಿತು ಅಳಿಲು
ಹಕ್ಕಿಯೊಡನೆ ತೋಡಿಕೊಂಡಿತೆನ್ನ ಅಳಲು

ಅಣಬೆ ಮೇಲೆ ಹಕ್ಕಿ ಕುಳಿತು
ತನ್ನ ಎಲ್ಲಾ ನೋವ ಮರೆತು
ಅಳಿಲ ಕಷ್ಟ ಸುಖಕೆ ಬೆರೆತು
ಗೂಡ ಕಟ್ಟಲು ಜಾಗ ಹುಡುಕಿತು

ನಿನ್ನ ಜೊತೆಗೆ ನಾನಿರುವೆ
ಸದಾ ನಿನಗೆ ನೆರಳಾಗಿರುವೆ
ಹಣ್ಣುಹಂಪಲ ತಂದು ಕೊಡುವೆ
ಎನುತ ನೀಡಿತದಕೆ ಭರವಸೆ

ಹಕ್ಕಿ ಅಳಿಲ ಸ್ನೇಹ ಬೆಸೆದು
ಹಸಿರ ಕಾಡಿನಲ್ಲಿ ಕುಣಿದು
ಕೊಳದ ಸಿಹಿ ನೀರು ಕುಡಿದು
ಜೊತೆಗಿಹವು ಗೆಳೆತನವ ಮೆರೆದು

**ಚೇತನ ಭಾರ್ಗವ, ಬೆಂಗಳೂರು**

### ಹಸಿರೇ ಉಸಿರು.....

ರಸ್ತೆ ಪಕ್ಕ ಹೊಗೆಯ ನುಂಗಿ
ಜೀವದುಸಿರು ನೀಡುವ
ದಾರಿಹೋಕ ದಣಿದು ಬಂದು
ನೆರಳನರಸಿ ನಿಲ್ಲುವ.....
ಚಿಲಿಪಿಲಿಯ ಹಕ್ಕಿಗಳಿಗೆ
ಆಶ್ರಯವನು ಈಯುವ
ಹೂವ ಬಿಟ್ಟು ಹಣ್ಣಕೊಟ್ಟು
ಜೀವಿಕುಲವನುಳಿಸುವ
ತರುಗಳೆಷ್ಟು ಚಂದವಿಹವು
ರಸ್ತೆ ಪಕ್ಕದಲ್ಲಿ.....
ತಂಪು ನೆರಳ ಹಸಿರಹಾಸ
ನಿಸ್ವಾರ್ಥದಿ ಚೆಲ್ಲಿ......!

ಎಮ್ಮ ಮೇಲೆ ನರರ ವಕ್ರದೃಷ್ಟಿ ಬೀಳದಿರಲಿ
ಎಂದೂ ಎಂದು
ಬೇಡುತಿಹವು ಮೌನದಿ.....!
ಅಗಲೀಕರಣ ನೆಪವನೊಡ್ಡಿ
ಬಲಿಯ ನೀಡಬೇಡಿರೆಂದು
ಅಂಗಲಾಚಿ ದೈನ್ಯದಿ.....!

ಹಸಿರು ಇದ್ದರೇನೇ ಉಸಿರು
ಹಸಿರು ಇದ್ದರೇನೇ ಮಳೆಯೂ....
ಹಸಿರಿನಿಂದ ಜಗದ ಉಳಿವು
ಹಸಿರಿನಿಂದ ಜಗದ ಹರಿವು....
ಜಗವನುಳಿಸೊ ಹಸಿರಮಾತೆ
ಮಕ್ಕಳುಳಿಯಲಿ.....!
ಜಗವು ನಾಳೆ.....ನಾಡಿದ್ದು
ಮುಂದುವರೆಯಲಿ......!

**– ಶೇಖರಯ್ಯ ಟಿ.ಎಚ್.ಎಂ. ಗೆದ್ದಲಗಟ್ಟಿ**

### ನೀವು ಇಲ್ಲಿಯವರು

ನೀವಿರುವುದು ಇಲ್ಲೆ
ಇಲ್ಲೆ ಇರುತ್ತೀರಿ
ಇಲ್ಲೆ ತಿನ್ನುತ್ತಿರಿ
ಇಲ್ಲಿಯ ನೀರು ಕುಡಿಯುತ್ತಿರಿ
ಇಲ್ಲೆ ಸಂಸಾರ ಮಾಡುತ್ತಿರಿ
ಇಲ್ಲೆ ಸಂತಾನ ಮಾಡುವಿರಿ
ಇಲ್ಲೆ ವ್ಯಾಪಾರ ಮಾಡುತ್ತಿರಿ
ಇಲ್ಲೆ ಲಾಭ ಗಳಿಸುತ್ತಿರಿ
ಇಲ್ಲೆ ಮನೆ ಕಟ್ಟುತ್ತಿರಿ
ಇಲ್ಲೆ ಭೂಮಿ ಖರಿದಿಸುತ್ತಿರಿ
ಇಲ್ಲೆ ನಿಮ್ಮ ಸ್ಮಶಾನ ಮಾಡುತ್ತಿರಿ
ಇಲ್ಲೆ ಸಾಯುತ್ತಿರಿ
ಇಲ್ಲೆ ಹುಳುತ್ತಾರೆ
ಇಲ್ಲೆ ಎಲ್ಲಾ ಮುಗಿಸುವಿರಿ
ಮತ್ತೇಕೆ ಈ ನೆಲದ ಅಭಿಮಾನವಿಲ್ಲ
ಪರನಾಡಿಗೆ ಜೈಕಾರ ಹಾಕುತ್ತಿರಿ
ಸೌಹಾರ್ಧ ಭಾವ ನಿಮಗೆಕಿಲ್ಲ
ಇಲ್ಲಿ ನೀವು ಹೀಗೆ
ಪ್ರಪಂಚದಲ್ಲೂ ಹೀಗೆನಾ?
ಇರಲಿ ಕಿಂಚಿತ್ತಾದರೂ ದೇಶಾಭಿಮಾನ
ಇರಲಿ ಒಂದಷ್ಟು ನಮ್ಮವರ ಮಾನ
ಇರಲಿ ಒಂದಷ್ಟು ಸಹೋದರ ಭಾವ
ಇರಲಿ ಒಂದಷ್ಟು ಮಾನವಿಯತೆ
ಇರಲಿ ಒಂದಷ್ಟು ನಾವೆಲ್ಲರೂ ಒಂದೆ
ಇರಲಿ ಒಂದಷ್ಟು...................

**ಚಂದ್ರಶೇಖರಯ್ಯ ರೋಣದಮಠ**

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

# ಅನಧಿಕೃತ ರೇಸಾರ್ಟ್, ಹೋಮ್ ಸ್ಟೇಗಳನ್ನು ಪತ್ತೆ ಹಚ್ಚಿ ನೋಟೀಸ್ ಜಾರಿಗೆ ಸೂಚನೆ

## ಕೊಪ್ಪಳ ತಹಶೀಲ್ದಾರ ವಿಠ್ಠಲ್ ಚೌಗಲಾ ಸೂಚನೆ। ಅನಧಿಕೃತ ಹೋಮ್‌ಸ್ಟೇ ತೆರವು ಸಭೆ




■ ಹಂಪಿ ಟೈಮ್ಸ್ ಕೊಪ್ಪಳ

ತಾಲ್ಲೂಕಿನ ನೊಂದಾಯಿತವಲ್ಲದ ರೇಸಾರ್ಟ, ಹೋಮ್ ಸ್ಟೇಗಳನ್ನು ಪತ್ತೆ ಹಚ್ಚಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಕೊಪ್ಪಳ ತಹಶೀಲ್ದಾರ ವಿಠ್ಠಲ್ ಚೌಗಲಾ ಹೇಳಿದರು.

ಅವರು ಮಂಗಳವಾರ ಕೊಪ್ಪಳ ತಹಶೀಲ್ದಾರ ಕಛೇರಿಯಲ್ಲಿ ತಾಲ್ಲೂಕಿನ ರೇಸಾರ್ಟ, ಹೋಮ್ ಸ್ಟೇಗಳ ತೆರವುಗೊಳಿಸುವ ಕುರಿತಂತೆ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕೊಪ್ಪಳ ತಾಲ್ಲೂಕ ವ್ಯಾಪ್ತಿಯಲ್ಲಿನ ದಾಖಲೆಗಳಿಲ್ಲದಿರುವ ರೇಸಾರ್ಟ, ಹೋಮ್ ಸ್ಟೇಗಳ ತೆರವುಗೊಳಿಸುವ ಕುರಿತು ವಿವಿಧ ಇಲಾಖಾ ಅಧಿಕಾರಿಗಳನ್ನು ಒಳಗೊಂಡಂತೆ ತಾಲ್ಲೂಕ ಮಟ್ಟದ ತಂಡವನ್ನು ರಚನೆ ಮಾಡಿ ಕೊಪ್ಪಳ ಜಿಲ್ಲಾಧಿಕಾರಿಗಳು ಆದೇಶಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ತಾಲ್ಲೂಕ ವ್ಯಾಪ್ತಿಯಲ್ಲಿ ಸೂಕ್ತ ಪರವಾನಿಗೆ ಇಲ್ಲದೇ ಹೋಮ್ ಸ್ಟೇ ರೇಸಾರ್ಟಗಳನ್ನು ನಡೆಸುತ್ತಿರುವ ಬಗ್ಗೆ ಮಾಹಿತಿ ಇದ್ದು, ಕಂದಾಯ ಇಲಾಖೆ, ಪಂಚಾಯತ್ ರಾಜ್ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಅಬಕಾರಿ ಇಲಾಖೆ, ಪೋಲೀಸ್ ಇಲಾಖೆ, ಅರಣ್ಯ ಇಲಾಖೆ ಮತ್ತು ಜೇಸ್ಕಾಂ ಇಲಾಖೆಗಳ ಅಧಿಕಾರಿಗಳು ಸಮನ್ವಯ ಸಾಧಿಸಿಕೊಂಡು ಕಾರ್ಯನಿರ್ವಹಿಸಿ ಎಲ್ಲಾ ರೇಸಾರ್ಟ ಮತ್ತು ಹೋಮ್ ಸ್ಟೇಗಳ ದಾಖಲೆಗಳನ್ನು ಪರಿಶೀಲಿಸಿ, ಅಧಿಕೃತ ಹಾಗೂ ಅನಧೀಕೃತವಿರುವ ಕುರಿತಂತೆ ಪಟ್ಟಿಯನ್ನು ತಯಾರಿ ಸಬೇಕು. ಈ ಕುರಿತು ರೇಸಾರ್ಟ ಹಾಗೂ ಹೋಮ್ ಸ್ಟೇಗಳ ಮಾಲೀಕರ ಜೊತೆಗೆ ಸಭೆಯನ್ನು ನಿಗಧಿಪಡಿಸಬೇಕು ಎಂದರು.

ಸಾರ್ವಜನಿಕರ ಸುರಕ್ಷತೆ, ಪ್ರವಾಸಿಗರ ರಕ್ಷಣೆ, ಕಾನೂನು ಸುವ್ಯವಸ್ಥೆ ಹಾಗೂ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಸ್ಥಳಿಯ ಗ್ರಾಮ ಪಂಚಾಯತಿ ಮಟ್ಟದಲ್ಲಿ ಕಂದಾಯ ಇಲಾಖೆ, ಪಂಚಾಯತ್ ರಾಜ್ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಅಬಕಾರಿ ಇಲಾಖೆ, ಪೋಲೀಸ್ ಇಲಾಖೆ, ಅರಣ್ಯ ಇಲಾಖೆ ಮತ್ತು ಜೇಸ್ಕಾಂ ಇಲಾಖೆಗಳ ಸಿಬ್ಬಂದಿಗಳನ್ನು ಒಳಗೊಂಡಂತೆ ತಂಡವನ್ನು ರಚನೆ ಮಾಡಲು ಸಂಬಂಧಿಸಿದ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಸೂಕ್ತ ಪರವಾನಿಗೆ ಇಲ್ಲದೇ ನಡೆಸುತ್ತಿರುವ ಎಲ್ಲಾ ರೇಸಾರ್ಟ ಮತ್ತು ಹೋಮ್ ಸ್ಟೇಗಳ ಮಾಲೀಕರಿಗೆ ನೋಟೀಸ್ ಜಾರಿಗೊಳಿಸಲು ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳಿಗೆ ಕ್ರಮ ವಹಿಸಬೇಕು. ಮುಂದಿನ ಏಳು ದಿನಗಳ ಒಳಗಾಗಿ ದಾಖಲೆಗಳನ್ನು ಪೂರೈಸದೇ ಇದ್ದಲ್ಲಿ ಅಂತಹ ಎಲ್ಲಾ ರೇಸಾರ್ಟ ಮತ್ತು ಹೋಮ್ ಸ್ಟೇಗಳ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ಒಂದು ವೇಳೆ ರೇಸಾರ್ಟ ಮತ್ತು ಹೋಮ್ ಸ್ಟೇಗಳನ್ನು ತೆರವುಗೊಳಿಸದೇ ಇದ್ದಲ್ಲಿ ಈ ಎಲ್ಲಾ ರೇಸಾರ್ಟ ಮತ್ತು ಹೋಮ್ ಸ್ಟೇಗಳ ಮಾಲೀಕರ ಮೇಲೆ ಕಾನೂನು ಕ್ರಮ ಜರುಗಿಸಲು ಸಭೆಯಲ್ಲಿ ತಿರ್ಮಾನಿಸಲಾಯಿತು.

ಸಭೆಯಲ್ಲಿ ಕೊಪ್ಪಳ ತಾಲ್ಲೂಕ ಪಂಚಾಯತ ಕಾರ್ಯ ನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ನಾಗರಾಜ್ ಸೇರಿದಂತೆ ಅಬಕಾರಿ ಇಲಾಖೆಯ ಅಬಕಾರಿ ನಿರೀಕ್ಷಕರು, ಪೋಲೀಸ್ ಇಲಾಖೆಯ ವೃತ್ತ ಆರಕ್ಷಕ ನಿರೀಕ್ಷಕರು, ಅರಣ್ಯ ಇಲಾಖೆಯ ವಲಯ ಅರಣ್ಯ ಅಧಿಕಾರಿಗಳು ಮತ್ತು ಜೇಸ್ಕಾಂ ಇಲಾಖೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಸೇರಿದಂತೆ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

# ಕರ್ನಾಟಕ ಸಾಹಿತ್ಯ ಅಕಾಡೆಮಿ : ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಗೊಟಗೋಡಿ ಹಾವೇರಿ ಜಿಲ್ಲೆ ಇವರ ಸಹಯೋಗದಲ್ಲಿ ಗಿರಿಜನ ಉಪ ಯೋಜನೆಯಡಿ ಕನ್ನಡ ಸಾಹಿತ್ಯ ಮತ್ತು ಸಾಂವಿಧಾನಿಕ ಮೌಲ್ಯಗಳು ಎಂಬ ಹೆಸರಿನಲ್ಲಿ 3 ದಿನಗಳ ಕಮ್ಮಟವನ್ನು ಏಪ್ರಿಲ್ 21, 22 ಮತ್ತು 23 ರಂದು ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಗೊಟಗೋಡಿ, ಹಾವೇರಿ ಜಿಲ್ಲೆಯಲ್ಲಿ ನಡೆಸಲು ಉದ್ದೇಶಿಸಿದ್ದು, ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯಿರುವ 20 ರಿಂದ 45 ವರ್ಷ ವಯಸ್ಸುಳ್ಳ ಪರಿಶಿಷ್ಟ ಪಂಗಡಕ್ಕೆ ಸೇರಿದ ರಾಜ್ಯದ ಎಲ್ಲಾ ಭಾಗದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಏ.05 ಕೊನೆಯ ದಿನ.

ಆಸಕ್ತ ಅಭ್ಯರ್ಥಿಗಳು ಕರ್ನಾಟಕ ಸಾಹಿತ್ಯ ಅಕಾಡೆಮಿಯ ವೆಬ್ ಸೈಟ್ http://karnatakasahithyaacademy.org ಇಂದ ಅರ್ಜಿ ನಮೂನೆ ಹಾಗೂ ವಿವರಗಳನ್ನು ಪಡೆದುಕೊಳ್ಳಬಹುದಾಗಿದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಕರಿಯಪ್ಪ. ಎನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಾ.20 ಸಫಾಯಿ ಕರ್ಮಚಾರಿಗಳ ತ್ರೈಮಾಸಿಕ ಸಭೆ

■ ಹಂಪಿ ಟೈಮ್ಸ್ ಹೊಸಪೇಟೆ

ಸಫಾಯಿ ಕರ್ಮಚಾರಿಗಳ ಉಪವಿಭಾಗ ಮಟ್ಟದ 1ನೇ ತ್ರೈಮಾಸಿಕ ನಿಗಾ ಸಮಿತಿ ಸಭೆ ಮಾರ್ಚ್ 20 ರಂದು ಸಂಜೆ 4:30 ಗಂಟೆಗೆ ಹೊಸಪೇಟೆ ಸಹಾಯಕ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಎಸಿ ವಿವೇಕಾನಂದ ಇವರ ಅಧ್ಯಕ್ಷತೆಯಲ್ಲಿ ಸಭೆ ಕರೆಯಲಾಗಿದೆ.

# ಅವಕಾಶ ಬಾಚಿಕೊಂಡವರು

■ ವೀಣಾ ಹೇಮಂತ್ ಗೌಡ ಪಾಟೀಲ್ ಮುಂಡರಗಿ



ಜಾರ್ಖಂಡ್‌ನಲ್ಲಿರುವ ಉಳಿದ ಸಾಮಾನ್ಯ ಯುವತಿಯರಂತೆಯೇ ನನ್ನ ಬದುಕು ಕೂಡ ಮುಗಿದು ಹೋಗುತ್ತದೆ ಎಂದು ನಾನು ಭಾವಿಸಿದ್ದೆ. ನಾನಿರುವ ಭಾಗದಲ್ಲಿ ಹೆಣ್ಣು ಮಕ್ಕಳ ಓದನ್ನು ಪ್ರೋತ್ಸಾಹಿಸುವುದಿಲ್ಲ... ನಮ್ಮಲ್ಲಿ ತಂದೆ ತಾಯಿಗಳು ಖುದ್ದಾಗಿ ಮಕ್ಕಳಿಗೆ ಶಾಲೆಯನ್ನು ತೊರೆಯುವಂತೆ ಒತ್ತಾಯಿ ಸುತ್ತಾರೆ. ಹೊಲ ಮನೆಯ ಕೆಲಸಗಳು ಮತ್ತು ಆಡು, ದನ, ಕುರಿಗಳನ್ನು ಕಾಯುವ ಕೆಲಸ ಮಾಡಲು ಒತ್ತಾಯಿಸುತ್ತಾರೆ. ಅವರಲ್ಲಿ ಇರುವ ತೀವ್ರ ಬಡತನ ಪಾಲಕರಲ್ಲಿ ಈ ಅನಿವಾರ್ಯತೆಯನ್ನು ಉಂಟುಮಾಡುತ್ತದೆ ಎಂಬುದು ನಿಜ ಕೂಡ. ಇಂತಹ ಪರಿಸ್ಥಿತಿಯಿಂದ ಆಕೆಯ ಪಾಲಕರು ಕೂಡ ಹೊರತಾಗಿರಲಿಲ್ಲ, ಆದರೂ ಕೂಡ ತನ್ನ ಜಾಣ್ಮೆಯಿಂದ ಆಕೆ ಹಾರ್ವರ್ಡ್ ಯೂನಿವರ್ಸಿಟಿಯ ಸಂಪೂರ್ಣ ಉಚಿತ ಶಿಕ್ಷಣದ ಸ್ಕಾಲರ್ಶಿಪ್ ಅನ್ನು ಪಡೆದಿದ್ದಾಳೆ. ಆಕೆಯೇ ನಮ್ಮ ಇಂದಿನ ಕಥಾನಾಯಕಿ ಸೀಮಾ ಕುಮಾರಿ.

ಸಾಮಾನ್ಯ ಬಾಲಕಿಯರಂತೆ ಆಕೆಯೂ ಕೂಡ ಶಾಲೆಗೆ ಹೋಗುತ್ತಿದ್ದಳು ಆಕೆಯ ಜೀವನದಲ್ಲಿ ಮಹತ್ವದ ತಿರುವು ಬಂದದ್ದು ಆಕೆ ಯುವ (ಯೂಥ್ ಫಾರ್ ಯುನಿಟಿ ಅಂಡ್ ವಾಲಂಟರಿ ಆಕ್ಷನ್) ಸೇರಿದ್ದು.

ಸೌಲಭ್ಯ ವಂಚಿತ ಯುವ ಜನತೆಗೆ ತಮ್ಮ ಶೈಕ್ಷಣಿಕ ಹಕ್ಕನ್ನು ಸಾಧಿಸಿಕೊಳ್ಳಲು ಇರುವ ಅಭಿವೃದ್ಧಿ ಸಂಸ್ಥೆ ಯಾದ ಯುವ ದಲ್ಲಿ ಫುಟ್ಬಾಲ್ ಮತ್ತು ಶಿಕ್ಷಣವನ್ನು ಜೊತೆಯಾಗಿ ಕಲಿಸುತ್ತಾರೆ.. ಯುವ ನಾಯಕಿಯಾಗಿ ಫುಟ್ಬಾಲ್ ತರಬೇತುದಾರಳಾಗಿ ಮತ್ತು ನಿರ್ವಾಹಕಿ ಆಗಿ ಕಾರ್ಯನಿರ್ವಹಿಸುತ್ತಿದ್ದ ಸೀಮಾ ತನ್ನ ಕಲಿಕಾ ಕೌಶಲ್ಯಗಳನ್ನು ಬೆಳೆಸಿಕೊಂಡು ಮತ್ತಷ್ಟು ಹೆಚ್ಚಿನ ಸಾಧನೆಗಳ ಎತ್ತರ ಏರಲು ಆರಂಭಿಸಿದಾಗ ಆಕೆಯ ಭವಿಷ್ಯವೇ ಬದಲಾಯಿತು.

ನಮ್ಮ ತಲೆ ಇರುವುದು ಕೇವಲ ಕೊಡವನ್ನು ಹೊರಲು ಅಲ್ಲ ಜವಾಬ್ದಾರಿ ಗಳನ್ನು ಹೊತ್ತು ಪೂರೈಸಲು, ನಮ್ಮ ಹೆಗಲು ಇರುವುದು ಒಬ್ಬರಿಗೊಬ್ಬರು ಸಂತೈಸಲು, ಒಬ್ಬರಿಗೊಬ್ಬರು ಹೆಗಲೆಣೆಯಾಗಿ ಸಾಗಲು ಮೊಣಕಾಲಿರುವುದು ನೋವನ್ನು ಅನುಭವಿಸಲು ಅಲ್ಲ ಫುಟ್ಬಾಲ್‌ನ್ನು ಮೊಣ ಕಾಲಿನ ಮೇಲೆ ಪುಟಿಸಿ ಕಾಲಿನಿಂದ ಜೋರಾಗಿ ಒದೆಯಲು. ಎಂಬ ಮುಖ ಪುಸ್ತಕದ ಜಾಹೀರಾತು ಹೇಳುವುದು ಕೂಡ ಇದೇ ವಿಷಯವನ್ನು.

ಇದಕ್ಕೂ ಮುನ್ನ ನಾನು ಕನಸು ಕಾಣಲು ಕೂಡ ಹೆದರುತ್ತಿದ್ದೆ...' ಯುವಾ'ಗೆ ಕಾಲಿಟ್ಟ ನಂತರ ನನ್ನ ಅಗೋಚರ ಕನಸಿನ ಹಕ್ಕಿಗೆ ರೆಕ್ಕೆ ಬಂದಂತಾಯ್ತು.

ಪ್ರಸ್ತುತ ವರ್ಷ ಹಾರ್ವರ್ಡ್ ವಿಶ್ವವಿದ್ಯಾಲಯದಿಂದ ಪದವಿಯನ್ನು ಪೂರೈಸುವ ಸೀಮಾಳ ಪಯಣ ಉಳಿದೆಲ್ಲ ಯುವತಿಯರಿಗೆ ಮಾರ್ಗದರ್ಶಿ ಯಾಗುತ್ತದೆ. ನಮ್ಮ ಜೀವನವನ್ನು ನಾವು ಹೀಗೆಯೇ ಇರಬಹುದು ಎಂದು ಊಹಿಸಲು ಸಾಧ್ಯವಿಲ್ಲ.... ನಮ್ಮ ಬದುಕನ್ನು ಈಗಾಗಲೇ ನಮ್ಮ ಪಾಲಕರು ಮತ್ತು ನಮ್ಮ ಹಣೆ ಬರಹ ನಿರ್ಧರಿಸಿದೆ ಎಂದು ಹೆಣ್ಣು ಮಕ್ಕಳು ಭಾವಿಸಬೇಕಾಗಿಲ್ಲ ಅವಕಾಶಗಳು ದೊರೆತಾಗ ಅವುಗಳನ್ನು ಉಪಯೋಗಿಸಿ ಕೊಳ್ಳುವುದನ್ನು, ಬಳಸಿ ಬೆಳೆಯುವುದನ್ನು ಕಲಿಯಲೇಬೇಕು ಎಂದು ನಾವು ಸೀಮಾ ಕುಮಾರಿಯ ಸೀಮಾಕುಮಾರಿಯ ಜೀವನದಿಂದ ಅರಿಯಬಹುದು.

ಎಲ್ಲರಿಗೂ ಎಲ್ಲಾ ಸಮಯದಲ್ಲಿಯೂ ಅವಕಾಶ ಸಿಗುವುದಿಲ್ಲ ನಿಜ ಆದರೆ ಸಿಕ್ಕ ಅವಕಾಶವನ್ನು ಸಮರ್ಥವಾಗಿ ಬಾಚಿ ಬಳಸಿಕೊಳ್ಳುವ ಮೂಲಕ ಬದುಕಿನಲ್ಲಿ ಯಶಸ್ಸನ್ನು ಹೊಂದಬೇಕು.

ಪ್ರಸ್ತುತ ವರ್ಷದ ಮಹಿಳಾ ದಿನಾಚರಣೆಯ ಘೋಷ ವಾಕ್ಯ 'ಸೀಜ ದ ಆಪರ್ಚುನಿಟಿ' ಹೇಳುವುದು ಕೂಡ ಇದನ್ನೇ.



ಇಂದು ಮಹಿಳೆಯರಿಗೆ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ, ಔದ್ಯೋಗಿಕವಾಗಿ ಎಲ್ಲ ರಂಗಗಳಲ್ಲಿಯೂ ವಿಪುಲ ಅವಕಾಶ ಗಳಿವೆ. ಪ್ರಪಂಚದ 300ಕ್ಕೂ ಹೆಚ್ಚು ಬಹು ರಾಷ್ಟ್ರೀಯ ಕಂಪನಿಗಳಲ್ಲಿ 30% ಕಾರ್ಯ ನಿರ್ವಾಹಕ ಅಧಿಕಾರಿಗಳು ಹೆಣ್ಣು ಮಕ್ಕಳು, 19% ನಷ್ಟು ಹೆಣ್ಣು ಮಕ್ಕಳು ವಿವಿಧ ಕಂಪನಿಗಳ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಶಿಕ್ಷಕಿಯರಾಗಿ, ಬ್ಯಾಂಕಿಂಗ್ ಕ್ಷೇತ್ರದಲ್ಲಿ,ಉದ್ಯಮದಲ್ಲಿ, ಗೃಹ ಉದ್ಯಮಗಳಲ್ಲಿ, ಶಾಲೆ ಕಾಲೇಜುಗಳಲ್ಲಿ, ಆರೋಗ್ಯ ಮತ್ತು ವೈದ್ಯಕೀಯ ರಂಗದಲ್ಲಿ ಮಹಿಳಾ ವೈದ್ಯರಿಗೆ ಇರುವಷ್ಟು ಅವಕಾಶಗಳು ಬೇರೆ ಯಾರಿಗೂ ಇಲ್ಲ, ಆದರೆ ಎಷ್ಟೋ ಜನರಿಗೆ ತಮಗೆ ಇರುವ ಅವಕಾಶಗಳ ಅರಿವು ಇಲ್ಲ.

ಗಂಡು ಮಕ್ಕಳಿಗೆ ಸರಿ ಸಮಾನವಾಗಿ ಹೆಣ್ಣು ಮಕ್ಕಳನ್ನು ಬೆಳೆಸುವ ನಿಟ್ಟಿನಲ್ಲಿ ಅವರ ಮಾನಸಿಕ ದೈಹಿಕ ಮತ್ತು ಭಾವನಾತ್ಮಕ ಬೆಳವಣಿಗೆ ಅತ್ಯಂತ ಮುಖ್ಯವಾದದ್ದು. ಛಲ ಮತ್ತು ಶ್ರದ್ಧೆ ನಮ್ಮಲ್ಲಿದ್ದರೆ ನಾವು ಕೂಡ ಒಂದು ದಿನ ಸೀಮಾ ಕುಮಾರಿಯಂತೆ ಆಗಲು ಸಾಧ್ಯ ಎಂದು ನಮ್ಮ ಯುವಜನತೆ ಅರಿತುಕೊಳ್ಳಬೇಕು. ಏನಂತೀರಾ ಸ್ನೇಹಿತರೆ?

# ಸಮಾಜ ಕಾರ್ಯವು ವಿಶ್ವಮಾನ್ಯವಾದುದು




■ ಹಂಪಿ ಟೈಮ್ಸ್ ಬಳ್ಳಾರಿ

ಮಾನವ ಕಲ್ಯಾಣಕ್ಕೆ ಸಹಕಾರಿಯಾಗಿರುವ ಸಮಾಜ ಕಾರ್ಯವು ವಿಶ್ವ ಮಾನ್ಯತೆಯನ್ನು ಪಡೆದಿದೆ. ಇಂದಿಗೂ ಸಾಮಾಜಿಕ ಕಾಳಜಿ ಇರುವ ವೃತ್ತಿಪರ ಸಮಾಜ ಕಾರ್ಯಕರ್ತರ ಸಾಮಾಜಿಕ ಸೇವೆಯು ಶ್ಲಾಘನೀಯ ಎಂದು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಂ. ಮುನಿರಾಜು ಅವರು ಹೇಳಿದರು.

ವಿಶ್ವವಿದ್ಯಾಲಯದ ಸಮಾಜ ಕಾರ್ಯ ವಿಭಾಗ ವತಿಯಿಂದ ವಿವಿಯ ಡಾ.ಬಿ.ಆರ್.ಅಂಬೇಡ್ಕರ್ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ವಿಶ್ವ ಸಮಾಜ ಕಾರ್ಯ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸಾಮಾಜಿಕ ನ್ಯಾಯ, ಮಾನವ ಹಕ್ಕುಗಳನ್ನು ಕಾಪಾಡುವಲ್ಲಿ, ಶೋಷಿತ ಮಹಿಳೆಯರು, ಮಕ್ಕಳು, ವೃದ್ಧರು, ಅನಾಥರು ಮತ್ತು ದೀನ ದುರ್ಬಲರನ್ನು ಆರೈಕೆ ಮಾಡುತ್ತಿರುವ ಸಾಮಾಜಿಕ ಕಾರ್ಯಕರ್ತರನ್ನು ಕೃತಜ್ಞತೆಯಿಂದ ನೆನೆಯುವ ದಿನವಾಗಿ ವಿಶ್ವ ಸಮಾಜ ಕಾರ್ಯ ದಿನವನ್ನು 1983ರಿಂದ ಸಾಮಾಜಿಕ ಕಾರ್ಯಕರ್ತರ ಅಂತಾರಾಷ್ಟ್ರೀಯ ಒಕ್ಕೂಟವು ಆಚರಿಸುತ್ತಾ ಬಂದಿದೆ. ಪ್ರಪಂಚದಾದ್ಯಂತ ಪ್ರತಿ ಮಾರ್ಚ್ ತಿಂಗಳ ಮೂರನೇ ಮಂಗಳವಾರ ವಿಶ್ವ ಸಮಾಜ ಕಾರ್ಯ ದಿನವನ್ನು ಆಚರಿಸಲಾಗುವುದು ಎಂದು ತಿಳಿಸಿದರು.

ಕುಲಸಚಿವ ಎಸ್.ಎನ್. ರುದ್ರೇಶ್ ಅವರು ಮಾತನಾಡಿ ಬುದ್ಧ, ಬಸವ ಅಂಬೇಡ್ಕರ್, ಲೋಹಿಯಾ, ಶಾಂತವೇರಿ ಗೋಪಾಲ ಗೌಡರ ತತ್ವಾದರ್ಶಗಳು ಇಂದಿನ ವಿದ್ಯಾರ್ಥಿ ಸಮಾಜ ಕಾರ್ಯಕರ್ತರಿಗೆ ಮಾದರಿಯಾಗಿವೆ ಎಂದರು.

ಕರ್ನಾಟಕ ಕಂಡ ಅಪರೂಪದ ಸಮಾಜ ಸೇವಕ, ನಾಡಿಗೆ ನಾಡೇ ನೆನೆಯುತ್ತಿರುವ ಡಾ. ಪುನೀತ್ ರಾಜ್ ನಮಗೆ ಆದರ್ಶರು ಮತ್ತು ಹೊಸಪೇಟೆಯಲ್ಲಿ ತನ್ನ ಹದಿನೇಳನೇ ವಯಸ್ಸಿಗೆ ತಮ್ಮ ದುಡಿಮೆಯ ಬಹುಪಾಲನ್ನು ಅನಾಥ ಮತ್ತು ವಿಕಲ ಚೇತನ ಮಕ್ಕಳಿಗೆ ಮೀಸಲಿರಿಸಿ ಸೇವೆ ಮಾಡುತ್ತಿರುವ ಕಾವ್ಯ ನಮಗೆ ಆದರ್ಶವೆಂದು ಮೌಲ್ಯ ಮಾಪನ ಕುಲಸಚಿವರಾದ ಪ್ರೊ.ಎನ್.ಎಂ.ಸಾಲಿ ಕಾರ್ಯಕ್ರಮದಲ್ಲಿ ಸ್ಮರಿಸಿದರು.

ವಿಭಾಗದ ಮುಖ್ಯಸ್ಥರಾದ ಪ್ರೊ.ಗೌರಿ ಮಾಣಿಕ ಮಾನಸ, ಆದಿಕವಿ ಮಹರ್ಷಿ ಶ್ರೀ ವಾಲ್ಮೀಕಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಡಾ.ರಶ್ಮಿ ರಾಣಿ ಅಗ್ನಿಹೋತ್ರಿ, ಭವಿತಾ, ಡಾ.ಕುಮಾರ್ ಸೇರಿದಂತೆ ಸಮಾಜ ಕಾರ್ಯ ವಿಭಾಗದ ಬೋಧಕರು, ಸಂಶೋಧನಾರ್ಥಿಗಳು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ರಾಮಕೃಷ್ಣ ವಿದ್ಯಾಶಾಲೆ: ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2025–2026ನೇ ಸಾಲಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಹಾಗೂ ಶುಚಿತ್ವ ವೃತ್ತಿಯಲ್ಲಿ ತೊಡಗಿರುವ ಪೋಷಕರ ಪ್ರತಿಭಾವಂತ ಗಂಡು ಮಕ್ಕಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ನೀಡಿ ಶ್ರೀ ರಾಮಕೃಷ್ಣ ವಿದ್ಯಾಶಾಲೆ ಮೈಸೂರು, ಇಲ್ಲಿಗೆ 9ನೇ ತರಗತಿಗೆ ಸೇರಿಸಲು ಜಿಲ್ಲೆಯಿಂದ 04 ವಿದ್ಯಾರ್ಥಿಗಳಿಗೆ ಪ್ರವೇಶ ಪರೀಕ್ಷೆಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಪಡೆದು ಭರ್ತಿ ಮಾಡಿ 6 ಮತ್ತು 7ನೇ ತರಗತಿಯ ಅಂಕಪಟ್ಟಿಯೊಂದಿಗೆ ಮಾ.25 ರೊಳಗಾಗಿ ಇದೇ ಕಚೇರಿ ಅರ್ಜಿ ಸಲ್ಲಿಸಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ಮಮತಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
**ಮೀನುಗಾರಿಕೆ ಇಲಾಖೆ**
**ಜಿಲ್ಲಾ ಪಂಚಾಯತ್ ವಿಜಯನಗರ**
**ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಾರ್ಯಾಲಯ, ತಾಲ್ಲೂಕು ಪಂಚಾಯತ್ ಆವರಣ, ಹರಪನಹಳ್ಳಿ**

ಮೀಇಹ/ಹೋ.ಗು.ವಾಹನ/01/2024–25 ದಿನಾಂಕ: 13/03/2025.

**ಅಲ್ಪಾವದಿ ಟೆಂಡರ್ ಪ್ರಕಟಣೆ**

ಮೀನುಗಾರಿಕೆ ಸಹಾಯಕ ನಿರ್ದೇಶಕರು ಹರಪನಹಳ್ಳಿ ತಾಲ್ಲೂಕು ಕಛೇರಿಗೆ 2025–26ನೇ ಸಾಲಿನ ಅವಧಿಗೆ ದಿನಾಂಕ: 01/03/2025 ರಿಂದ 31/03/2026 ರವರೆಗೆ (12 ತಿಂಗಳು) 2018 ರ ನಂತರದ ಮಾಡೆಲ್‌ನ ಒಂದು ಸುಸಜ್ಜಿತವಾದ ಹಾಗೂ ಉತ್ತಮ ಸ್ಥಿತಿಯಲ್ಲಿರುವ ಬೋಲೆರೋ ಜೀಪು ಅಥವಾ /ಟಾಟಾ ಇಂಡಿಗೋ/ಟೊಯೋಟೋ ಇಟಿಯೋಸ್/ಮಾರುತಿ ಡಿಸೈರ್/ ಫೋರ್ಡ ಆಕ್ಟಿವಾ, ಆಸ್ಪೈರ್/ ಹೊಂಡ ಅಮೇಸ್/ಇತರೆ ಮಾಡೆಲ್ ಕಾರನ್ನು ನುರಿತ ಚಾಲಕನೊಂದಿಗೆ ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು ಅರ್ಹ ಟೂರ್ ಅಂಡ್ ಟ್ರಾವೆಲ್ಸ್ ಏಜನ್ಸಿ / ಸಂಸ್ಥೆಗಳಿಂದ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ.
**ಟೆಂಡರ್ ವಿವರ ಈ ಕೆಳಗಿನಂತಿದೆ**

| | | |
|---|---|---|
| 1 | ಟೆಂಡರ್ ಫಾರಂನ ಬೆಲೆ | ರೂ. 200=00, (ಟೆಂಡರ್ ಅರ್ಜಿ ಶುಲ್ಕವನ್ನು ಪಾವತಿಸಿ ಸಾಮಾನ್ಯ ರಶೀದಿಯನ್ನು ಪಡೆದುಕೊಳ್ಳುವುದು) |
| 2 | ವಾಹನ ಬಾಡಿಗೆ ಟೆಂಡರ್‌ನ ಗರಿಷ್ಟ ಮೊತ್ತ ರೂ. (ದಿ: 01 ಎಪ್ರಿಲ್–2025 ರಿಂದ 31–ಮಾರ್ಚ್–2026 ರವರೆಗೆ) | ರೂ. 5.4 ಲಕ್ಷ (ಎ.ಸಿ ಸಹಿತ ವಾಹನ– 12 ತಿಂಗಳು) |
| 3 | ಟೆಂಡರ್ ಫಾರಂ ಕೊಡುವ ದಿನಾಂಕ | ದಿನಾಂಕ: 13–03–2025 (ಕಛೇರಿ ವೇಳೆಯಲ್ಲಿ) |
| 4 | ಟೆಂಡರ್ ಫಾರಂನ್ನು ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಲು ಕೊನೆಯ ದಿನಾಂಕ | ದಿನಾಂಕ: 27–03–2025 ರ ಅಪರಾಹ್ನ: 02.00 ಗಂಟೆವರೆಗೆ |
| 5 | ಟೆಂಡರ್ ತೆರೆಯುವ ದಿನಾಂಕ | ದಿ: 29–03–2025 ರಂದು ಪೂರ್ವಾಹ್ನ:11.30 ಗಂಟೆಗೆ (ಮೀನುಗಾರಿಕೆ ಉಪ ನಿರ್ದೇಶಕರು ವಿಜಯನಗರ ಅಥವಾ ಅವರ ಪ್ರತಿನಿಧಿ ಇವರ ಸಮ್ಮುಖದಲ್ಲಿ ತೆರೆಯಲಾಗುವುದು). |
| 6 | ಇ.ಎಂ.ಡಿ (ಮುಂಗಡ ಠೇವಣಿ) | ಟೆಂಡರ್‌ನ ಗರಿಷ್ಟ ಮೊತ್ತದ 2.5% ರಷ್ಟು ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ ಯನ್ನು ಮೀನುಗಾರಿಕೆ ಸಹಾಯಕ ನಿರ್ದೇಶಕರು ಹರಪನಹಳ್ಳಿ ಇವರ ಹೆಸರಿಗೆ ಪಡೆದು ಸಲ್ಲಿಸತಕ್ಕದ್ದು. (ರೂ. 13500/–) |

**ಸೂಚನೆ:** ಟೆಂಡರ್ ಅಧಿಸೂಚನೆಯ ಮಾಹಿತಿಯ ವಿವರ ಮತ್ತು ಇತರೆ ನಿಯಮಗಳ ಬಗ್ಗೆ ಈ ಕಛೇರಿಗೆ ಸಂಪರ್ಕಿಸಿ ಮಾಹಿತಿಯನ್ನು ಪಡೆದುಕೊಳ್ಳಬಹುದು.

**ಸಹಿ/– ಮೀನುಗಾರಿಕೆ ಸಹಾಯಕ ನಿರ್ದೇಶಕರು**
**ಹರಪನಹಳ್ಳಿ**

ಮೈಕ್ರೋ ನ್ಯೂಸ್

## ಮಾ.20 ರಂದು ಬಾಬುಜೀ ಅಂಬೇಡ್ಕರ್ ಜಯಂತಿ ಪೂರ್ವಭಾವಿ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**
ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನ್ ರಾಂ ಜಯಂತೋತ್ಸವ ದಿನಚಾರಣೆಯನ್ನು ಆಚರಿಸುವ ಕುರಿತು ಪೂರ್ವಭಾವಿ ಸಭೆ ಮತ್ತು ಪರಿಶಿಷ್ಟ ಜಾತಿ ಹಾಗೂ ಪಂಗಡದವರ ಕುಂದು ಕೊರತೆ ಸಭೆಯನ್ನು ಮಾ.20 ರಂದು, ಬೆ.11 ಗಂಟೆಗೆ, ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.
ಏಪ್ರಿಲ್ 5 ರಂದು ಹಸಿರು ಕ್ರಾಂತಿ ಹರಿಕಾರ ಹಾಗೂ ಮಾಜಿ ಉಪಪ್ರಧಾನಿಗಳಾದ ಡಾ.ಬಾಬು ಜಗಜೀವನ್ ರಾಂರವರ 118 ನೇ ಜಯಂತಿ ಕಾರ್ಯಕ್ರಮ ಹಾಗೂ ಏಪ್ರಿಲ್ 14 ರಂದು ಭಾರತ ರತ್ನ ಹಾಗೂ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್‌ರವರ 134 ನೇ ಜಯಂತಿ ಕಾರ್ಯಕ್ರಮ ಅರ್ಥಪೂರ್ಣವಾಗಿ ಆಚರಿಸಬೇಕು. ಸಭೆಗೆ ಎಲ್ಲಾ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಬೇರೊಬ್ಬ ಸಿಬ್ಬಂದಿಯನ್ನು ನಿಯೋಜಿಸದೇ ಖುದ್ದಾಗಿ ಹಾಜರಾಗಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬೇಸಿಗೆಯಲ್ಲಿ ಮೈಬೆವರಿದಷ್ಟು ಒಳ್ಳೆಯದು ಪ್ರತಿ 20 ನಿಮಿಷಕ್ಕೊಮ್ಮೆ ನೀರು ಕುಡಿಯಿರಿ

### ಡಿಹೆಚ್‌ಓ ಡಾ.ಶಂಕರ್‌ನಾಯ್ಕ ಸಲಹೆ । ಶುದ್ಧ ಕುಡಿಯುವ ನೀರಿನ ಅರವಟ್ಟಿಗೆ ಉದ್ಘಾಟನೆ

**ಹಂಪಿ ಟೈಮ್ಸ್ ಹೊಸಪೇಟೆ**
ಮಾರ್ಚ್, ಏಪ್ರಿಲ್, ಮೇ ತಿಂಗಳ ಅಂತ್ಯದವರೆಗೆ ಬಿಸಿಲಿನ ತಾಪಮಾನ ಹೆಚ್ಚಾಗುತ್ತಿರುವ ನಿಟ್ಟಿನಲ್ಲಿ ಪ್ರತಿಯೊಬ್ಬರು 20 ನಿಮಿಷಕ್ಕೊಮ್ಮೆ ನೀರು ಕುಡಿಯುವ ಅಭ್ಯಾಸ ಮಾಡಿಕೊಳ್ಳಬೇಕು ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಲ್.ಆರ್.ಶಂಕರನಾಯ್ಕ ಸಲಹೆ ನೀಡಿದರು.




ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಆವರಣದಲ್ಲಿ ಜಿಲ್ಲಾ ಆರೋಗ್ಯ ಇಲಾಖೆ ಮತ್ತು ಸ್ನೇಹ ಬಳಗದಿಂದ ನೂತನವಾಗಿ ಆರಂಭಿಸಿರುವ ಶುದ್ಧ ಕುಡಿಯುವ ನೀರಿನ ಅರವಟ್ಟಿಗೆಯನ್ನು ಉದ್ಘಾಟಿಸಿ ಮಂಗಳವಾರ ಮಾತನಾಡಿದರು, ಅಧಿಕ ಬಿಸಿಲಿನ ತಾಪಮಾನಕ್ಕೆ ಪ್ರತಿಯೊಬ್ಬರು ನಿರ್ಜಲೀಕರಣ ಸಮಸ್ಯೆ ಎದುರಿಸಲಿದ್ದಾರೆ. ಸಾರ್ವಜನಿಕರು ಬೇಸಿಗೆಯಲ್ಲಿ ಬಾಯಾರಿಕೆ ಆಗದಿದ್ದರೂ ಪದೇ ಪದೇ ನೀರು ಅಥವಾ ಹಣ್ಣಿನ ರಸಗಳನ್ನು ಕುಡಿಯುವ ಅಭ್ಯಾಸ ಮಾಡಿಕೊಳ್ಳಬೇಕಿದೆ. ಬೇಸಿಗೆಯಲ್ಲಿ ಮೈ ಬೆವರಿದಷ್ಟು ಒಳ್ಳೆಯದು. ಆದಷ್ಟು ನೈಸರ್ಗಿಕ ಜ್ಯೂಸ್‌ಗಳನ್ನು ಹೆಚ್ಚಾಗಿ ಸೇವಿಸಿ. ಕಲ್ಲಂಗಡಿ, ಕರಬೂಜ, ಕಿತ್ತಳೆ, ದ್ರಾಕ್ಷಿ, ಅನಾನಾಸ್, ಸೌತೆಕಾಯಿ, ಎಳನೀರು ಸವಿಯುವುದು, ಮನೆಯಲ್ಲಿಯೇ ಸಿದ್ದಪಡಿಸಿದ ನಿಂಬೆಹಣ್ಣಿನ ಶರಬತ್ತು, ಮಜ್ಜಿಗೆ ಸೇರಿದಂತೆ ಹಣ್ಣಿನ ಪಾನೀಯಗಳಿಗೆ ಚಿಟಿಕೆ ಉಪ್ಪಿನೊಂದಿಗೆ ಸೇವಿಸುವುದು ಉತ್ತಮ. ವಿಶೇಷವಾಗಿ ಬಿಸಿಲಿನಿಂದ ನಿರ್ಜಲೀಕರಣವಾದ ರೋಗಿಗಳಿಗೆ ಸಾರ್ವಜನಿಕ ಉಪ ವಿಭಾಗದ ಆಸ್ಪತ್ರೆಯಲ್ಲಿ ಹವಾನಿಯಂತ್ರಿತ ಐದು ವಿಶೇಷ ಹಾಸಿಗೆಗಳನ್ನು ಮೀಸಲಿರಿಸಲಾಗಿದೆ. ಸಮುದಾಯ ಆರೋಗ್ಯ ಕೇಂದ್ರದಲ್ಲೂ ಈ ವ್ಯವಸ್ಥೆ ಇರಲಿದೆ ಎಂದರು.

ಈ ವೇಳೆ ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ.ಜಂಬಯ್ಯ ನಾಯಕ, ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಸತೀಶ ಚಂದ್ರ, ಜಿಲ್ಲಾ ಕುಷ್ಠ ರೋಗ ನಿಯಂತ್ರಾಣಧಿಕಾರಿ ಡಾ.ರಾಧಿಕಾ, ಹೊಸಪೇಟೆ ತಾಲೂಕು ಆರೋಗ್ಯಾಧಿಕಾರಿ ಡಾ.ಬಸವರಾಜ, ಆರೋಗ್ಯ ರಕ್ಷಾ ಸಮಿತಿಯ ಸದಸ್ಯರಾದ ಯೋಗಲಕ್ಷ್ಮೀ, ವೆಂಕಟೇಶ್, ಗುಂಡಿ ರಾಘವೇಂದ್ರ, ಹನುಮಂತರೆಡ್ಡಿ, ಫಾತೀಮಾಬೀ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ, ಜಿಲ್ಲಾ ಆರೋಗ್ಯ ನಿರೀಕ್ಷಣಾಧಿಕಾರಿ ಧರ್ಮನಗೌಡ, ಗಣಕಯಂತ್ರ ನಿರ್ವಾಹಕ ಕೌಶಿಕ್, ಫಯಾಜ್, ಮಹೇಶ್, ಸುರೇಶ್, ನಿತ್ಯಾನಂದ, ಮರಿ ವೀರಭದ್ರಯ್ಯ, ಸಹಾಯಕ ಆಡಳಿತಾಧಿಕಾರಿ ಗಿರಿಧರ ಹಾಗೂ ಸಿಬ್ಬಂದಿ ಇದ್ದರು.


ಹಂಪಿ ಟೈಮ್ಸ್ SSLC ಮಾರ್ಗದರ್ಶಿ ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

## ನಿತ್ಯ ಪಂಚಾಂಗ

ಮಾಸ: ಫಾಲ್ಗುಣ । ಸಂವತ್ಸರ: ಕ್ರೋಧಿ

**19–03–2025 – ಬುಧವಾರ**

| | |
|---|---|
| ತಿಥಿ | : ಪಂಚಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ವಿಶಾಖ |
| ಯೋಗ | : ಹರ್ಷಣ |
| ಕರಣ | : ಕೌಳವ |
| ಸೂರ್ಯೋದಯ | : 06:33:05 |
| ಸೂರ್ಯಾಸ್ತ | : 18:36:25 |
| ರಾಹು ಕಾಲ | : 12:35–14:05 |
| ಯಮಘಂಡ ಕಾಲ | : 08:04–09:34 |
| ಗುಳಿಕ ಕಾಲ | : 11:04–12:35 |



## ತುಂಗಭದ್ರಾ ನೀರಿನ ಮಟ್ಟ

ಮಂಗಳವಾರ : 18–03–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1598.53 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 6335 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 19.690 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1582.59 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 831 ಕ್ಯುಸೆಕ್ |
| ಸಾಮರ್ಥ್ಯ | 5.853 ಟಿಎಂಸಿ |




## ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರದ ಸುತ್ತ ನಿರ್ಬಂಧಿತ ಪ್ರದೇಶ ಘೋಷಣೆ

**ಹಂಪಿ ಟೈಮ್ಸ್ ಹೊಸಪೇಟೆ**
2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಗಳ ಸುತ್ತಲು 200 ಮೀಟರ್ ಆವರಣವನ್ನು ನಿರ್ಬಂಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾ ದಂಡಾಧಿಕಾರಿ ಎಂ.ಎಸ್.ದಿವಾಕರ ಆದೇಶಿಸಿದ್ದಾರೆ.




ಜಿಲ್ಲೆಯಾದ್ಯಂತ ಮಾ.21 ರಿಂದ ಏ.04 ರವರೆಗೆ ನಡೆಯಲಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಸುಗಮವಾಗಿ ನಡೆಯುವ ನಿಟ್ಟಿನಲ್ಲಿ 71 ಪರೀಕ್ಷಾ ಕೇಂದ್ರದ ವ್ಯಾಪ್ತಿಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಿಕೊಂಡು ಬರುವ ಹಿತದೃಷ್ಟಿಯಿಂದ, ನಿರ್ಬಂಧಿತ ಪ್ರದೇಶದ ವ್ಯಾಪ್ತಿಯಲ್ಲಿ ಜೆರಾಕ್ಸ್, ಸೈಬರ್ ಸೆಂಟರ್‌ಗಳನ್ನು ಮುಚ್ಚಲು ಆದೇಶಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಪ್ರದೇಶದಲ್ಲಿ ಯಾವುದೇ ಬಾಹ್ಯ, ಅನ್ಯ ವ್ಯಕ್ತಿಗಳಿಗೆ ಹಾಗೂ ಎಲ್ಲಾ ಮಾಧ್ಯಮದವರಿಗೆ ಪ್ರವೇಶ ನಿಷೇಧಿಸಿದೆ. ಪರೀಕ್ಷಾ ಕೇಂದ್ರಗಳಲ್ಲಿ ಮುಖ್ಯ ಅಧೀಕ್ಷಕರು ಅನಿವಾರ್ಯ ಸಂದರ್ಭಗಳಲ್ಲಿ ಸಂವಹನಕ್ಕಾಗಿ ಬೇಸಿಕ್ ಮೊಬೈಲ್ ಫೋನ್ ಬಳಸಲು ಮಾತ್ರ ಅನುಮತಿ ನೀಡಲಾಗಿದ್ದು, ಸದರಿ ಪರೀಕ್ಷಾ ಕಾರ್ಯಕ್ಕೆ ನಿಯೋಜನೆಗೊಂಡಿರುವ ಅಧಿಕಾರಿ, ಸಿಬ್ಬಂದಿ ಹಾಗೂ ಪರೀಕ್ಷಾರ್ಥಿಗಳಿಗೆ ಕಡ್ಡಾಯವಾಗಿ ಮೊಬೈಲ್ ಫೋನ್‌ನನ್ನು ನಿಷೇಧಿಸಿದೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಾ.21 ತುರ್ತು ನೀರಾವರಿ ಸಲಹಾ ಸಮಿತಿ ಸಭೆ

**ಹಂಪಿ ಟೈಮ್ಸ್ ಬಳ್ಳಾರಿ**
ತುಂಗಾಭದ್ರಾ ಯೋಜನೆಯ ಎಡದಂಡೆ ಕಾಲುವೆ ಹಾಗೂ ಬಲದಂಡೆ ಕೆಳ ಮಟ್ಟದ ಕಾಲುವೆಯಡಿ ಹಿಂಗಾರು ಹಂಗಾಮಿಗೆ ಬೆಳೆದು ನಿಂತ ಬೆಳೆಗಳಿಗೆ ಕೊರತೆಯಾಗುವ ನೀರನ್ನು ಒದಗಿಸಲು ಮತ್ತು ಹಿಂಗಾರು ಹಂಗಾಮಿನಲ್ಲಿ ಲಭ್ಯವಾದ, ಬಳಕೆಯಾದ ಮತ್ತು ಉಳಿತಾಯವಾಗುವ ನೀರನ್ನು ನಿಂತ ಬೆಳೆಗಳಿಗೆ ಒದಗಿಸುವ ಕುರಿತು ಚರ್ಚಿಸಲು ಮಾ.21 ರಂದು ಸಂಜೆ 04 ಗಂಟೆಗೆ ಬೆಂಗಳೂರಿನ ವಿಧಾನಸೌಧದ 3 ನೇ ಮಹಡಿಯ ಕೊಠಡಿ ಸಂಖ್ಯೆ.334 ರ ಸಮ್ಮೇಳನ ಸಭಾಂಗಣದಲ್ಲಿ 123 ನೇ ತುರ್ತು ನೀರಾವರಿ ಸಲಹಾ ಸಮಿತಿ ಸಭೆಯನ್ನು ಆಯೋಜಿಸಲಾಗಿದೆ.

ಉಪಮುಖ್ಯಮಂತ್ರಿ ಹಾಗೂ ಜಲಸಂಪನ್ಮೂಲ ಇಲಾಖೆ ಸಚಿವರಾದ ಡಿ.ಕೆ.ಶಿವಕುಮಾರ್ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಮತ್ತು ನೀರಾವರಿ ಸಲಹಾ ಸಮಿತಿಯ ಅಧ್ಯಕ್ಷರೂ ಆದ ಶಿವರಾಜ ಎಸ್.ತಂಗಡಗಿ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ತುಂಗಾಭದ್ರಾ ಯೋಜನೆ ಮತ್ತು ವಿಜಯನಗರ ಕಾಲುವೆಗಳ ನೀರಾವರಿ ಸಲಹಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ತಿಳಿಸಿದ್ದಾರೆ.

